ವಿಜಯಪುರ | ಸಂಪುಟ 01 | ಸಂಚಿಕೆ 303 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಭಾನುವಾರ, ಜನವರಿ 28, 2024

“ಕಾಂಗ್ರೆಸ್ ಪಕ್ಷ ನೀಡಿದ 5 ಗ್ಯಾರಂಟಿಗಳನ್ನು ಈಡೇರಿಸಿ ಕೊಟ್ಟ ಮಾತು ಉಳಿಸಿಕೊಂಡಿದೆ. ಇದರ ಮಧ್ಯೆ ಮತಕ್ಷೇತ್ರಕ್ಕೆ ರೂ.125ಕೋಟಿ ಮಂಜೂರು ಮಾಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಸಚಿವ ಸಂಪುಟ ಸಹಕಾರ ನೀಡಿದೆ.



ಉದಯರಶ್ಮಿ ದಿನಪತ್ರಿಕೆ

– ಅಶೋಕ ಎಂ. ಮನಗೂಳಿ
ಶಾಸಕರು, ಸಿಂದಗಿ ಮತಕ್ಷೇತ್ರ

### ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಮಾಹಿತಿ

# ಮುಳವಾಡ ಏತನೀರಾವರಿ 3ನೇ ಹಂತದ ಯೋಜನೆಗೆ ಅನುಮೋದನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮುಳವಾಡ ಏತನೀರಾವರಿ ಯೋಜನೆ 3ನೇ ಹಂತದ 15ನೇ ವಿತರಣೆ ಕಾಲುವೆ, 5ಎ ಮತ್ತು 5ಬಿ ಹೆಡ್ ವರ್ಕ್ ಕಾಮಗಾರಿಗಳಿಗೆ ಕೆಬಿಜೆಎನ್‌ಎಲ್ ಬೋರ್ಡ್ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಶೀಘ್ರದಲ್ಲಿ ಟೆಂಡರ್ ಪ್ರಕ್ರಿಯೆ ನಡೆಯಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಅರ್ಜುಣಗಿಯಲ್ಲಿ ಶುಕ್ರವಾರ ಮೌನೇಶ್ವರ ಮನುಕ ಕಲರ ಶಾರ್ಟಿಂಗ್ ಮಶೀನ್ ಉದ್ಘಾಟಿಸಿ ಅವರು ಮಾತನಾಡಿದರು.

ಜಲಸಂಪನ್ಮೂಲ ಸಚಿವನಾಗಿದ್ದಾಗ ನೀರಾವರಿ ಯೋಜನೆಗಳಿಗಾಗಿ ಒಂಬತ್ತು ಸ್ಥಾವರ ಮತ್ತು 1000 ಕಿ. ಮೀ. ಮುಖ್ಯ ಕಾಲುವೆ ನಿರ್ಮಾಣ ಮಾಡಿದ್ದೇನೆ. ರೂ. 14000 ಕೋ. ಖರ್ಚು ಮಾಡಿ ಕಾಲುವೆಗಳ ಮೂಲಕ ರೈತರ ಹೊಲಗಳಿಗೆ, ಕೆರೆಗಳಿಗೆ ಹಾಗೂ ಹಳ್ಳಗಳಿಗೆ ನೀರು ಹರಿಸಲಾಗಿದೆ. ಇದ-ರಿಂದಾಗಿ ಜಿಲ್ಲೆಯಲ್ಲಿ ಅಂತರ್ಜಲ ಕೂಡ ಗಣನೀಯವಾಗಿ ಹೆಚ್ಚಿದೆ. ಇದರ ಪರಿಣಾಮ ಈ ಬಾರಿ ಜಿಲ್ಲೆಯಲ್ಲಿ ತೀವ್ರ ಬರವಿದ್ದರೂ ಅದು ಅಷ್ಟೊಂದು ಪರಿಣಾಮ ಬೀರಿಲ್ಲ. ಮಹಿಳೆಯರು ಮತ್ತು ಮಕ್ಕಳು ಕುಡಿಯುವ ನೀರಿಗಾಗಿ ಅಲೆದಾಡುವುದು ತಪ್ಪಿದೆ ಎಂದು ಅವರು ತಿಳಿಸಿದರು.

ಆಲಮಟ್ಟಿ ಜಲಾಷಯದ ಎತ್ತರ ಹೆಚ್ಚಳದ ನಂತರ ನೀರು ಬಿಡುಗಡೆಗೆ ಬೇಕಾಗಿರುವ ಎಲ್ಲ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಮಾಡಲಾಗಿದೆ. ಈಗ ಬಾಕಿ ಇರುವ 14000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಮುಳವಾಡ ಏತ ನೀರಾವರಿ ಯೋಜನೆ 3ನೇ ಹಂತದ ಕಾಮಗಾರಿಗಳಿಗೆ ಬೋರ್ಡ್ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಟೆಂಡರ್ ಕರೆದು ಭೂಸ್ವಾಧೀನ ಸೇರಿದಂತೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡು ರೈತರ ಜಮೀನುಗಳಿಗೆ ಶಾಶ್ವತವಾಗಿ ನೀರು ಒದಗಿಸಲಾಗುವುದು. ಇದೇ ವೇಳೆ ಕಾತ್ರಾಳ ಮತ್ತು ಜಾಲಗೇರಿ ಕೆರೆಗಳಿಗೆ ಬೇರೆ ತುಂಬಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ಜಿಲ್ಲೆಯಲ್ಲಿ ನೀರಾವ-ರಿಯಿಂದಾಗಿ ಕೃಷಿ ಚಟುವಟಿ-ಕೆಗಳಿಗೂ ಉತ್ತೇಜನ ಸಿಕ್ಕಿದ್ದು, ರೈತರು ಸ್ವಾವಲಂಬಿಯಾಗುತ್ತಿದ್ದಾರೆ. ಅಲ್ಲದೇ, ರೈತರ ಬೆಳೆಗಳಿಗೆ ಉತ್ತಮ ಬೆಲೆ ಸಿಗುವಂತಾಗಲು ಹಾಗೂ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಈಗ ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಇತ್ತೀಚೆಗೆ ದಾವೋಸ್ ಪ್ರವಾಸದಲ್ಲಿ ಲುಲು ಮಾಲ್ ಮುಖ್ಯಸ್ಥ ಯುಸೂಫ್ ಅಲಿ ಅವರನ್ನು ಭೇಟಿ ಮಾಡಿ ವಿಜಯಪುರದಲ್ಲಿ ಆಹಾರ ಸಂಸ್ಕರಣೆ ಘಟಕ ಸ್ಥಾಪಿಸಲು ಆಹ್ವಾನ ನೀಡಿದ್ದು, ಅವರು ಒಪ್ಪಿಗೆ ಸೂಚಿಸಿದ್ದಾರೆ. ಅಲ್ಲದೇ ಬಿಎಲ್ ಆಗ್ರೋ ಕಂಪನಿಯ ಜೊತೆಗೂ ಬೃಹತ್ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿಜಯಪುರ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ರೂಪುರೇಷೆ ಹಾಕಿಕೊಂಡು ಕೆಲಸ ಮಾಡುತ್ತಿದ್ದೇನೆ. ಮಹಾತ್ಮಾ ಗಾಂಧಿಜೀಯವರ ಕನಸಿನಂತೆ ಜಿಲ್ಲೆಯಲ್ಲಿ ಹಳ್ಳಿಗಳ ಅಭಿವೃದ್ಧಿ ಮಾಡುವ ಮೂಲಕ ಸ್ವರಾಜ್ಯ ಕನಸನ್ನು ನನಸು ಮಾಡಲಾಗುತ್ತಿದೆ ಎಂದು ಎಂ. ಬಿ. ಪಾಟೀಲ ತಿಳಿಸಿದರು.

ಈ ಸಂದರ್ಭದಲ್ಲಿ ಚಿಕ್ಕಪಡಸಲಗಿ ಬಬಲಾದಿ ಮಠಾಧೀಶ ಶಿವರುದ್ರಯ್ಯ ಮಹಾಸ್ವಾಮಿಗಳು, ಚಿಕ್ಕಪಡಸಲಗಿ ಅಕ್ಕಮಹಾದೇವಿ ಆಶ್ರಮದ ಮಾತೆ ಅಕ್ಕಮಹಾದೇವಿ, ಮನುಕ ಗ್ರೇಡಿಂಗ್ ಘಟಕದ ಮಾಲಿಕ ಮತ್ತು ಪ್ರಗತಿಪರ ರೈತ ಗುರಪ್ಪ ಬಡಿಗೇರ, ಮುಖಂಡರಾದ ಬಸವರಾಜ ದೇಸಾಯಿ, ಚನ್ನಪ್ಪ ಕೊಪ್ಪದ, ಮಲ್ಲಪ್ಪ ಕೆಂಪವಾಡ, ವೈ. ಎನ್. ಪಾಟೀಲ, ರಫೀಕ ಸೋನಾರ, ನಿರ್ಮಲ ರುಣವಾಲ, ಅಶೋಕ ಕಾಖಂಡಕಿ, ಅರ್ಜುಣಗಿ, ಹೆಬ್ಬಾಳಟ್ಟಿ, ಹೊಕ್ಕುಂಡಿ, ಯಕ್ಕುಂಡಿ, ಕವಟಗಿ, ಚಿಕ್ಕಪಡಸಲಗಿ, ಕಾತ್ರಾಳ, ಚಿಕ್ಕಲಕಿ ಕ್ರಾಸ್, ಬೋಳಚಿಕ್ಕಲಕಿ ಗ್ರಾಮಗಳ ರೈತರು ಉಪಸ್ಥಿತರಿದ್ದರು.



### ರಾಜ ನುಡಿ

ಎಲ್ಲಕ್ಕಿಂತ ಬೆಲೆ ಬಾಳುವ ಖಜಾನೆ ಎಲ್ಲಿದೆ ಎಂದರೆ ಸ್ಮಶಾನದಲ್ಲಿ 4 ಅಡಿ ಕೆಳಗಿದೆಯಂತೆ. ಏಕೆಂದರೆ ಸಾವಿರಾರು 'ಐಡಿಯಾಸ್' ಗಳು ತಲೆಯಿಂದ ಹೊರಬರದೆ ಅಲ್ಲೇ ಶವವಾಗಿ ಮಣ್ಣಾಗಿವೆಯಂತೆ. ಇದಕ್ಕೆ ಕಾರಣ 'ಜನ ಏನೆಂದುಕೊಂಡಾರು' ಎಂಬ ರೋಗ ಅವರಿಗಿತ್ತಂತೆ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 289

**ನುಡಿಯಬಾರದ ಅಂಗ ಲಿಂಗ ಸಂಗದ ಪರಿಣಾಮ**

*ಅಂಗಸಂಗದಲ್ಲಿ ಲಿಂಗಸಂಗಿಯಾದೆನು.*
*ಲಿಂಗಸಂಗದಲ್ಲಿ ಅಂಗಸಂಗಿಯಾದೆನು.*
*ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು.*
*ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು.*
*ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ*
*ಎನ್ನ ನಾನು ಏನೆಂದೂ ಅರಿಯೆನಯ್ಯಾ.*
*– ಅಕ್ಕಮಹಾದೇವಿಯವರು*

ಅಂಗಬಾವಹೊದ್ದು ಉಡ-ುತಡಿಯಿಂದ ಕಲ್ಯಾಣಕ್ಕೆ ಬಂದ ಅಕ್ಕನಿಗೆ ಕಲ್ಯಾಣದಲ್ಲಿ ಲಿಂಗಸಮಾನ ಶರಣರ ಸಂಪರ್ಕದೊರೆಯಿತು. ಇಷ್ಟಲಿಂಗದ ಸಂಗದಿಂದ ತಾನು ಅಂಗಭಾವ ಅಳಿದ ಸ್ಥಿತಿಯನ್ನು ಅಂಗಸಂಗದಲ್ಲಿ ಲಿಂಗಸಂಗಿಯಾದೆನು ಎಂದಿರುವುದು. ಅಂಗವೇ ಲಿಂಗವಾದಾಗ ಅಂಗ ಮತ್ತು ಲಿಂಗ ಭೇದ ಅಳಿಯುತ್ತದೆ. ಆಗ ಅಂಗವು ಲಿಂಗವನ್ನು ಲಿಂಗವು ಅಂಗವನ್ನು ಸಂಪೂರ್ಣ ಆವರಿಸಿರುವುದರಿಂದ ಇದರ ಸಂಪೂರ್ಣ ಅರಿವನ್ನು ಅರಿಯದೆ ಕೇವಲ ಈ ಸ್ಥಿತಿಯ ಪರಿಣಾಮವನ್ನು ಮಾತ್ರ ಅನುಭವಿಸುತ್ತಿರುವುದಾಗಿ ತಿಳಿಸುತ್ತ ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು. ಎಂದಿರುವರು. ಇದು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲದ (ನುಡಿಯ ಗಡಣವ ಮರೆದು)ಅನುಭಾವ ಅಂಗ ಲಿಂಗ ಭಾವರಹಿತಳಾಗಿ ಚೆನ್ನಮಲ್ಲಿಕಾರ್ಜುನನನ್ನು ಬೆರೆತು ಅನುಭವಿಸುತ್ತಿರುವೆ ಎಂದಿರುವರು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ದೇವಣಗಾಂವ ಗ್ರಾಮಸ್ಥರಿಂದ ಭವ್ಯ ಸ್ವಾಗತ

## ವಿಜಯಪುರಕ್ಕೆ ಆಗಮಿಸಿದ ರಥಯಾತ್ರೆ



**ಉದಯರಶ್ಮಿ ನ್ಯೂಸ್**

ಆಲಮೇಲ: ತಾಲೂಕಿನ ಗಡಿಗ್ರಾಮ ದೇವಣಗಾಂವ ಭೀಮಾ ನದಿ ತೀರದ ಸೇತುವೆಯ ಮೇಲೆ ಕರ್ನಾಟಕ ಸುವರ್ಣ ಸಂಭ್ರಮ ರಥಯಾತ್ರೆಗೆ ಅದ್ದೂರಿ ಸ್ವಾಗತ ಮಾಡಿಕೊಳ್ಳಲಾಯಿತು.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನಿಂದ ವಿಜಯಪುರ ಜಿಲ್ಲೆಗೆ ರಥಯಾತ್ರೆ ಆಗಮಿಸಿತು. ಆಲಮೇಲ ತಹಶಿಲ್ದಾರ ಸುರೇಶ ಚಾವಲರ ಅವರ ನೇತೃತ್ವದಲ್ಲಿ ದೇವಣಗಾಂವ ಗ್ರಾಪಂ ಅಧ್ಯಕ್ಷೆ ಶ್ರೀಮತಿ ರೇಣುಕಾ ನಡುವಿನಕೇರಿ ರಥಕ್ಕೆ ಪೂಜೆ ಸಲ್ಲಿಸಿ, ಹೂಮಾಲೆ ಹಾಕಿ, ಆರತಿ ಬೆಳಗಿ ಸ್ವಾಗತ ಮಾಡಿಕೊಂಡರು.

ಶಾಲಾ ಮಕ್ಕಳ ಕೋಲಾಟ, ಜಯಘೋಷ, ಕನ್ನಡದ ಕವಿಗಳ ಭಾವಚಿತ್ರಗಳು, ಕನ್ನಡ ಧ್ವಜ ಎಲ್ಲೆಡೆ ರಾರಾಜಿಸಿದವು, ಡೊಳ್ಳು ಕುಣಿತ, ಹಲಗೆಮೇಳ, ಚಿಟ್ಟಹಲಗೆ, ಮುತ್ತೈದೆಯರು ಕುಂಭ, ಆರತಿಯೊಂದಿಗೆ ರಥದ ಮುಂದೆ ಸಾಗಿದರು. ಕನ್ನಡ ಗೀತೆಗಳ ಗಾಯನಕ್ಕೆ ನೆರೆದಿದ್ದ ಯುವಕರು, ಮಕ್ಕಳು, ಹಿರಿಯರು, ಮಹಿಳೆಯರು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ತಹಶಿಲ್ದಾರ ಸುರೇಶ ಚಾವಲರ, ಬಿಇಓ ಆರಿಫ್ ಬಿರಾದಾರ, ಎಂ.ಎ.ಅತ್ತಾರ, ಎ.ಎಸ್.ಮುಕಿಹಾಳ, ತಾಪಂ ಎಡಿ ಸಿದ್ದು ಅಂಕಲಗಿ, ಪಿಡಿಓ ಸಂಜು ದೊಡಮನಿ, ರವಿ ಬಿರಾದಾರ, ಪ್ರಾಚಾರ್ಯ ಸುರೇಶ ಗಂಗನಳ್ಳಿ, ಶ್ರೀನಿವಾಸ ಕಾಂಬಳೆ, ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ, ಅಶೋಕ ಕೊಳಾರಿ, ಶ್ರೀಶೈಲ ಮಠಪತಿ, ಪ್ರಭು ವಾಲಿಕಾರ, ಎನ್.ಎ.ಬಂಡಗರ, ಸಿದ್ದಯ್ಯ ಮಠಪತಿ, ಶರಣಪ್ಪ ಗುಬ್ಬೆವಾಡ, ಶಿವಪುತ್ರಗೌಡ ಕಡ್ಲೇವಾಡ, ಸಿದ್ದಾರಾಮ ಹಂಗರಗಿ, ಷಣ್ಮುಖಪ್ಪ ಸೊಮನಾಯಕ, ದವಲಪ್ಪ ಬಡದಾಳ, ಮುತ್ತು ಕಲಶೆಟ್ಟಿ, ವಿಠ್ಠಲ ಯರಗಲ್, ಶಂಕರಲಿಂಗ ನಡುವಿನಕೇರಿ, ನಿಂಗಪ್ಪ ಅಳ್ಳಗಿ, ಸಿದ್ದು ಹೀರಾಪುರ, ಬಸವರಾಜ ಹೀರಾಪುರ, ಅನೀಲ ಸಿಂದಗಿ, ಪ್ರಕಾಶ ಗಂಗನಳ್ಳಿ, ದತ್ತಾತ್ರೆಯ ಸೊನ್ನ, ಅಶೋಕ ಗಂಗನಳ್ಳಿ, ಶಿವು ಕಾಟಕರ ಸೇರಿದಂತೆ ಇತರರು ಭಾಗವಹಿಸಿದ್ದರು.


ಭೀಮಾ ಸೇತುವೆಯಿಂದ ಪ್ರಗತಿಪರ ಶಿಕ್ಷಣ ಸಂಸ್ಥೆಯ ಆವರಣದವರೆಗೆ ರಥವು ಸಂಚರಿಸಿತು. ಶಾಲಾ ಶಿಕ್ಷಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ವಿವಿಧ ಸಂಘಟನೆಗಳ ಕಾರ್ಯಕರ್ತರು ರಥಯಾತ್ರೆಯಲ್ಲಿ ಭಾಗವಹಿಸಿದ್ದರು. ಆಲಮೇಲ ಎಸ್ಸೈ ಕುಮಾರ ಹಾಡಕಾರ ಹಾಗೂ ಸಿಬ್ಬಂದಿ ಬಂದೋಬಸ್ತ್ ಕೈಗೊಂಡಿದ್ದರು.

## ಮಾಜಿ ಸಚಿವ ದಿ.ಎಂ.ಸಿ ಮನಗೂಳಿ 3ನೇ ಪುಣ್ಯಸ್ಮರಣೆ ಇಂದು

**ಉದಯರಶ್ಮಿ ನ್ಯೂಸ್**



ಸಿಂದಗಿ: ಆಧುನಿಕ ಭಗೀರಥ, ಶಿಕ್ಷಣ ಪ್ರೇಮಿ, ಮಾಜಿ ಸಚಿವ ದಿ.ಎಂ.ಸಿ ಮನಗೂಳಿ ಅವರ 3ನೆಯ ಪುಣ್ಯಸ್ಮರಣೆಯನ್ನು ಪಟ್ಟಣದ ಎಚ್.ಜಿ.ಹೈಸ್ಕೂಲ್ ಆವರಣದಲ್ಲಿ ಜ.28 ಭಾನುವಾರದಂದು ಬೆಳಿಗ್ಗೆ 10ಗಂಟೆಗೆ ನಮ್ಮ ಕುಟುಂಬದವರು ಆಯೋಜನೆ ಮಾಡಿದ್ದಾರೆ. ಪಟ್ಟಣ ಸೇರಿದಂತೆ ತಾಲೂಕಿನ ಎಲ್ಲ ಜನತೆ ಹಾಗೂ ದಿ.ಎಂ.ಸಿ ಮನಗೂಳಿ ಅವರ ಅಭಿಮಾನಿ ಬಳಗ, ಪಕ್ಷದ ಕಾರ್ಯಕರ್ತರು, ಮುಖಂಡರು, ರೈತರು, ಮಹಿಳೆಯರು, ವಿವಿಧ ಸಂಘಡನೆಯ ಪದಾಧಿಕಾರಿಗಳು, ಕಾರ್ಯಕರ್ತರು, ಪ್ರಮುಖರು, ಯುವಕರು ದಿ.ಎಂ.ಸಿ ಮನಗೂಳಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮಕ್ಕೆ ಆಗಮಿಸಿ ನಮ್ಮ ತಂದೆಯವರ ಆತ್ಮಕ್ಕೆ ಶಾಂತಿ ಕೊರಬೇಕೆಂದು ಶಾಸಕ ಅಶೋಕ ಮನಗೂಳಿ ಮತಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದ್ದಾರೆ.



# ಆಲಮೇಲದಲ್ಲಿ ಗಣರಾಜ್ಯೋತ್ಸವ ದಿನಾಚರಣೆ



**ಉದಯರಶ್ಮಿ ನ್ಯೂಸ್**

ಆಲಮೇಲ: ಪಟ್ಟಣದ ಶ್ರೀ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಆಲಮೇಲ ದಲ್ಲಿ ಸಂಭ್ರಮದ ಗಣ-ರಾಜ್ಯೋತ್ಸವ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪಟ್ಟಣದ ಹಿರಿಯ ಸಾಹಿತಿ ಸಿದ್ದಾರಾಮ ಉಪ್ಪಿನ ಅವರು ಧ್ವಜಾರೋಹಣ ನೆರವೇ-ರಿಸಿದರು.

ಅಧ್ಯಕ್ಷತೆಯನ್ನು ಸಂಸ್ಥೆಯ ಅದ್ಯಕ್ಷ ಎಸ್.ಆಯ್.ಜೋಗೂರ, ಅತಿಥಿಗಳಾಗಿ ಆಡಳಿತ ಮಂಡಳಿಯ ಕೋಶಾಧ್ಯಕ್ಷ ಎ.ಜಿ.ಕುಲಕರ್ಣಿ, ಸದಸ್ಯರಾದ ಶಿವಾನಂದ ಮಾರ್ಸನಳ್ಳಿ ಉಪಸ್ಥಿತರಿದ್ದರು.

ಈ ವೇಳೆ ಸಂಸ್ಥೆಯ ವತಿಯಿಂದ ಸಾಹಿತಿ ಸಿದ್ದಾರಾಮ ಉಪ್ಪಿನ ರವ-ರಿಗೆ ಇತ್ತೀಚೆಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದಕ್ಕಾಗಿ ಹಾಗೂ ಶಾಲೆಯ ಮುಖ್ಯ ಗುರು ಲಕ್ಷ್ಮೀಪುತ್ರ ಕಿರನಳ್ಳಿ ರವರಿಗೆ ಜ್ಯೋತಿಬಾ ಫುಲೆ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದಿದಕ್ಕಾಗಿ ಸನ್ಮಾನಿಸಲಾಯಿತು.

ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದ ಸಿದ್ದಾರಾಮ ಉಪ್ಪಿನ ರವರು, ಆಲಮೇಲ ಪಟ್ಟಣದಲ್ಲಿಯೇ ಬಡಮಕ್ಕಳ ಶಿಕ್ಷಣ-ಕ್ಕಾಗಿ ಶಿಕ್ಷಣ ಸಂಸ್ಥೆಯು ಕಳೆದ ನಾಲ್ಕು ದಶಕಗಳಿಂದ ತನ್ನ ಕಾರ್ಯವನ್ನು ಯಾವುದೇ ಪ್ರಚಾರವಿಲ್ಲದೆ ಮಾಡುತ್ತ ಬಂದಿದೆ. ಇಲ್ಲಿಯ ಮಕ್ಕಳು ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದ್ದು, ಉತ್ತಮ ಸಂಸ್ಕಾರಯುತವಾದ ಶಿಕ್ಷಣ ನೀಡುವಲ್ಲಿ ಸಂಸ್ಥೆಯ ಹಾಗೂ ಶಿಕ್ಷಕರ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮವನ್ನು ಶಿಕ್ಷಕ ಚಂದ್ರಕಾಂತ ದೇವರಮನಿ ನಿರೂಪಿಸಿದರು, ಶ್ರೀಮತಿ ಸುವರ್ಣ ಸಾರಂಗಮಠ ಸ್ವಾಗತಿಸಿದರು, ಶಿಕ್ಷಕ ಈರಣ್ಣ ಕಲಶೆಟ್ಟಿ ವಂದಿಸಿದರು.

ಮಕ್ಕಳಿಂದ ಭಾಷಣ, ಸಾಮೂಹಿಕ ಕವಾಯತು, ಡ್ರೀಲ್, ಲೇಝಿಮ, ದೇಶಭಕ್ತಿ ಗೀತೆಗಳ ಮೇಲೆ ನೃತ್ಯ ಮಾಡಲಾಯಿತು.

# ಕ್ರೀಡೆಗಳು ಜೀವನಕ್ಕೆ ಸಹಕಾರಿ :ಸಂಯುಕ್ತ ಪಾಟೀಲ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಕ್ರೀಡೆಯಲ್ಲಿ ಭಾಗವಹಿಸುವಿಕೆಯು ಮನೋಭಾವ ಬೆಳೆಸಿಕೊಂಡರೆ ಜೀವನದಲ್ಲಿ ಗೆಲುವು ಸಿಗಲು ಸಹಕಾರಿಯಾಗುತ್ತದೆ ಎಂದು ವ್ಹಿಡಿಸಿಸಿ ಬ್ಯಾಂಕ್ ನಿರ್ದೇಶಕಿ ಸಂಯುಕ್ತ ಪಾಟೀಲ ಹೇಳಿದರು.

ಪಟ್ಟಣದ ಬಸವೇಶ್ವರ ಪಪೂ. ಕಾಲೇಜು ಆವರಣದಲ್ಲಿ ಗಣ-ರಾಜ್ಯೋತ್ಸವ ಅಂಗವಾಗಿ ಕಂದಾಯ ಇಲಾಖೆ ಎರಡು ದಿನಗಳ ಕಾಲ ಹಮ್ಮಿಕೊಂಡಿರುವ ವಿವಿಧ ಇಲಾಖೆಗಳ ಕ್ರಿಕೆಟ್ ಪಂದ್ಯಾವಳಿಗೆ ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಜೀವನದಲ್ಲಿ ಕ್ರೀಡೆ ಮನುಷ್ಯನನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಡಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ತಮ್ಮ ದೈನಂದಿನ ಕೆಲಸದೊಂದಿಗೆ ಕ್ರೀಡಾ ಚಟುವಟಿ-ಕೆಯಲ್ಲಿ ಭಾಗಹಿಸುವಂತಾಗಬೇಕು. ಸರ್ಕಾರಿ ನೌಕರ ಬಾಂಧವರು ತಮ್ಮ ಕೆಲಸದ ಒತ್ತಡದ ನಡುವೆಯೂ ಸಾಮಾಜಿಕ ಮನೋಭಾವವನ್ನು ಮೈಗೂಡಿಸಿಕೊಂಡು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಭಾಗಬಹಿಸುವದು ಅಭಿನಂದನೀಯ ಎಂದರು.

ಬಸವನಬಾಗೇವಾಡಿ ಮತಕ್ಷೇತ್ರವು ಸಾಕಷ್ಟು ಅಭಿವೃದ್ಧಿ ಹೊಂದುವ ಮೂಲಕ ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವಾಗಿದೆ . ಕ್ಷೇತ್ರದ ಅಭಿವೃದ್ಧಿಯಲ್ಲಿ ನನ್ನ ತಂದೆ ಸಚಿವ ಶಿವಾನಂದ ಪಾಟೀಲ ಅವರೊಂದಿಗೆ ಕ್ಷೇತ್ರದ ಎಲ್ಲ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರ ಬಾಂಧವರು ತಮ್ಮ ಸಹಕಾರ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಕೈ ಜೋಡಿಸಿದ್ದಾರೆ ಎಂದರು.

ತಹಸೀಲ್ದಾರ ಯಮುನಪ್ಪ ಸೋಮನಕಟ್ಟಿ ಮಾತನಾಡಿ, ಕ್ರೀಡಾಕೂಟದಲ್ಲಿ ಸೋಲು-ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಮುಖ್ಯವಾಗಿರುತ್ತದೆ. ವಿವಿಧ ಇಲಾಖೆ ನೌಕರ ಬಾಂಧವರು ಒಟ್ಟಾಗಿ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸ್ನೇಹ ಬಂದುತ್ವಕ್ಕೆ ಪೂರಕವಾಗುತ್ತದೆ ಎಂದರು.

ಈ ಕಾರ್ಯಕ್ರಮದಲ್ಲಿ ನೌಕರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ, ಭೂ ಮಾಪನ ಇಲಾಖೆಯ ಅಧಿಕಾರಿ ಬಿ.ಬಿ. ವಗ್ಗಣ್ಣನವರ, ಬಿಇಓ ವಸಂತ ರಾಠೋಡ, ಪುರಸಭೆ ಮುಖ್ಯಾಧಿಕಾರಿ ಎಚ್.ಎಸ್. ಚಿತ್ತರಗಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಾಹೇಬಲಾಲ ದಳವಾಯಿ, ಉಪಪ್ರಾಚಾರ್ಯ ರಮೇಶ ಪೂಜಾರಿ, ಕಾನಿಪ ಅಧ್ಯಕ್ಷ ಅಜೀಜ ಬಳಬಟ್ಟಿ, ವಕೀಲರ ಸಂಘದ ಅಧ್ಯಕ್ಷ ಎಚ್. ಎಸ್. ಗುರಡ್ಡಿ ಇತರರು ಇದ್ದರು.

ರಾಹುಲ ಪಾಟೀಲ, ಪ್ರಶಾಂತ ಪಾಟೀಲ, ಶ್ರೀಶೈಲ ಮಾನೆ ಅವರು ಅಂಪೈರ್ ಗಳಾಗಿ ಕಾರ್ಯನಿರ್ವಹಿಸಿದರು.

ಪಂದ್ಯಾವಳಿಯಲ್ಲಿ ಕಂದಾಯ, ಸಮಾಜ ಕಲ್ಯಾಣ ಇಲಾಖೆ, ಅಗ್ನಿ ಶಾಮಕ, ಪೊಲೀಸ ಇಲಾಖೆ, ಕಾರ್ಯನಿರತ ಪತ್ರಕರ್ತರ ಸಂಘ., ಆರೋಗ್ಯ ಇಲಾಖೆ, ಕೆ ಎಸ್ ಆರ್ ಟಿ ಸಿ., ಪುರಸಭೆ ಹಾಗೂ ನ್ಯಾಯಾಂಗ ಇಲಾಖೆಯ ತಂಡಗಳು ಭಾಗವಹಿಸಿವೆ.

ಇಂದು ಜರುಗಿದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆ ಹಾಗೂ ಹೆಸ್ಕಾಂ ಮತ್ತು ಕಂದಾಯ ಇಲಾಖೆಯೊಂದಿಗೆ ಜರುಗಿದ ಸ್ಪರ್ಧೆ ರೋಚಕವಾಗಿ ಜರುಗಿತು.

# ಫೆ.1 ರಂದು ಲಿಂ. ಎಂ.ಎಂ.ಸಜ್ಜನ ಪುಣ್ಯಸ್ಮರಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಫೆ.1 ರಂದು ಬೆ.10-30 ಕ್ಕೆ ಪಟ್ಟಣದ ಬಾಲಕಿಯರ ಪ್ರೌಢ ಶಾಲೆಯ ಸಾಂಸ್ಕೃತಿಕ ವೇದಿಕೆಯಲ್ಲಿ ಮಾಜಿ ಶಾಸಕರಾದ ಲಿಂ. ಎಂ.ಎಂ.ಸಜ್ಜನ ಅವರ ದ್ವಿತೀಯ ಪುಣ್ಯ ಸ್ಮರಣೆ ಹಾಗೂ ದತ್ತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ತಾಲೂಕು ಶರಣ ಸಾಹಿತ್ಯ ಪರಿಷತ್ತು, ಲಿಂಗೈಕ್ಯರ ಅಭಿಮಾನಿ ಬಳಗ ಹಾಗೂ ಸಜ್ಜನ ಪರಿವಾರದ ಸಹಯೋಗದೊಂದಿಗೆ ನಡೆಯುವ ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕೊಲ್ಹಾರದ ದಿಗಂಬರೇಶ್ವರ ಸಂಸ್ಥಾನಮಠದ ಪರಮ ಪೂಜ್ಯ ಯೋಗಿ ಕಲ್ಲಿನಾಥ ದೇವರು ವಹಿಸಲಿದ್ದು ಶಾಸಕ ಸಿ.ಎಸ್.ನಾಡಗೌಡರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಾಗಲಕೋಟದ ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಮುತ್ತಗಿಯ ರಮೇಶ ಸೂಳಿಭಾವಿ, ಗಣ್ಯ ವ್ಯಾಪಾರಿ ಬಸವರಾಜ ಮೋಟಗಿ ಆಗಮಿಸಲಿದ್ದು, ವೀರಶೈವ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ವಿ.ಎಂ.ನಾಗಠಾಣ, ಚೇರಮನ್ ಎಂ.ಎಸ್.ನಾವದಗಿ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಸವರಾಜ ನಾಲತವಾಡ ಗೌರವ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಎನ್‌ವೈಕೆಎಸ್ ಸದಸ್ಯರಾಗಿ ರಾಮಚಂದ್ರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತ ಸರ್ಕಾರದ ನೆಹರು ಯುವ ಕೇಂದ್ರ ಸಂಘಟನೆಯ (ಎನ್‌ವೈಕೆಎಸ್) ವಿಜಯಪುರ ಜಿಲ್ಲಾ ಸಲಹಾ ಸಮಿತಿ ನಾಮನಿರ್ದೇಶಿತ ಸದಸ್ಯರಾಗಿ ಇಲ್ಲಿನ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಚವ್ಹಾಣ ಇವರನ್ನು ಕೇಂದ್ರದ ಯುವ ಜನ ಸೇವೆ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ ಅವರ ಶಿಫಾರಸ್ಸಿನ ಮೇರೆಗೆ ನೇಮಕಗೊಳಿಸಿ ಎನ್‌ವೈಕೆ-ಎಸ್‌ನ ಡೈರಕ್ಟರ್ ಜನರಲ್ ನಿತೀಶ್‌ಕುಮಾರ ಮಿಶ್ರಾ ಆದೇಶ ಹೊರಡಿಸಿದ್ದಾರೆ.



## ಆಲಮೇಲ ತೋಟಗಾರಿಕೆ ವಿವಿ ಮಂಜೂರಿಗೆ ಸಿಎಂ ಭರವಸೆ । ಶಾಸಕ ಅಶೋಕ ಮನಗೂಳಿ ಮಾಹಿತಿ

# ಗ್ಯಾರಂಟಿ ಮಧ್ಯೆಯೂ ರೂ.125 ಕೋಟಿ ಅನುದಾನ ಮಂಜೂರು!

**ಉದಯರಶ್ಮಿ ನ್ಯೂಸ್**

ಸಿಂದಗಿ: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ನೀಡಿದ 5 ಗ್ಯಾರಂಟಿಗಳನ್ನು ಈಡೇರಿಸಿ, ಕೊಟ್ಟ ಮಾತನ್ನೂ ಸರಕಾರ ಉಳಿಸಿಕೊಂಡಿದೆ. ಇದರ ಮಧ್ಯೆದಲ್ಲಿ ಮತಕ್ಷೇತ್ರಕ್ಕೆ 125 ಕೋಟಿ ಅನುದಾನವನ್ನು ಮಂಜೂರು ಮಾಡಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಸಚಿವ ಸಂಪುಟ ಸಹಕಾರ ನೀಡಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.



ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಛೇರಿಯಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಂದಗಿ ಮತಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಿದ ಹಿನ್ನೆಲೆಯಲ್ಲಿ ಜನತೆಯ ಪರವಾಗಿ ರಾಜ್ಯ ಸರಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. 50 ಸಾವಿರಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಸಿಂದಗಿ ನಗರಕ್ಕೆ ಯೋಜನಾ ಪ್ರಾಧಿಕಾರವನ್ನು ಸರಕಾರದಿಂದ ಮಂಜೂರಾತಿ ಪಡೆಯಲಾಗಿದೆ. ತಾಲೂಕಿನ ಯರಗಲ್ ಬಿಕೆ, ಬಂದಾಳ, ಚಿಕ್ಕಸಿಂದಗಿ, ರಾಂಪೂರ ಮತ್ತು ಸೋಂಪೂರ ಗ್ರಾಮಗಳನ್ನು ಒಳಗೊಂಡು ಯೋಜನಾ ಪ್ರಾಧಿಕಾರ ರಚಿಸಲಾಗಿದೆ.

ಪ್ರತಿ ಶಾಸಕರಿಗೆ ನೀಡುವ 25 ಕೋಟಿ ರೂ. ಅನುದಾನದಲ್ಲಿ ಸಿಂದಗಿ ಮತಕ್ಷೇತ್ರದ 49 ಹಳ್ಳಿಗಳಲ್ಲಿ 14ಕೋಟಿ ರೂ. ಹಣವನ್ನು ಸಿಸಿ ರಸ್ತೆ, ಚರಂಡಿ ಮತ್ತು 8.70 ಕೋಟಿ ಹಣವನ್ನು ವಿವಿಧ ಹಳ್ಳಿಗಳಲ್ಲಿನ ಸಮುದಾಯಗಳಿಗೆ ಮೀಸಲು. 2.30 ಕೋಟಿ ರೂ. ಹಣವನ್ನು ಅಲ್ಪಸಂಖ್ಯಾತರ ಸಮುದಾಯಕ್ಕೆ ಭವನ ಮತ್ತು ಸಿಸಿ ರಸ್ತೆಗೆ ಮೀಸಲಿಡಲಾಗಿದೆ.

ನಗರದ ಮುಖ್ಯ ರಸ್ತೆಗಳ ಬೀದಿ ದೀಪಗಳಿಗೆ 5 ಕೋಟಿ, ಮುಖ್ಯ ರಸ್ತೆಗಳ ಡಿವೈಡರ್ ನಿರ್ಮಾಣ-ಕ್ಕೆ 1.25 ಕೋಟಿ, ಸಿಂದಗಿಯಲ್ಲಿನ ಹೊನ್ನಪ್ಪಗೌಡ ಲೇವೌಟನ್ 3ಎಕರೆ ಸರಕಾರಿ ಜಮೀನಿನಲ್ಲಿ ಅರಣ್ಯ ಇಲಾಖೆಯ ಅನುಮೋದನೆಯೊಂದಿಗೆ 71ಕೋಟಿ ರೂ. ವೆಚ್ಚದಲ್ಲಿ ಟ್ರೀ ಪಾರ್ಕ್ ನಿರ್ಮಾಣ, ವಾಕಿಂಗ್ ಪಾರ್ಕ್ ಮತ್ತು ಸ್ವಿಮ್ಮಿಂಗ್ ಫುಲ್, ಸಾರ್ವಜನಿಕ ಆಸ್ಪತ್ರೆಯ ಅಭಿವೃದ್ಧಿಗೆ 1.5 ಕೋಟಿ, ಕೃಷಿ ಉತನ್ನ ಮಾರುಕಟ್ಟೆಯ ಸಿಸಿ ರಸ್ತೆ ನಿರ್ಮಾಣಕ್ಕೆ 3 ಕೋಟಿ, ಆಲಮೇಲ ಪ್ರದೇಶಾಭಿವೃದ್ಧಿಗೆ 5ಕೋಟಿ, ಆಲಮೇಲದಲ್ಲಿರವ ಕೆರೆ ನಿರ್ಮಾಣ-ಕ್ಕೆ ಮತ್ತು ಪ್ರಾವಸಿತಾಣ ಮಾಡುವ ನಿಟ್ಟಿನಲ್ಲಿ 3.50 ಕೋಟಿ ಯೋಜನೆ ರೂಪಿಸಲಾಗಿದೆ, ಹಂದಿಗನೂರ ಕೆರೆಯ ಅಭಿವೃದ್ಧಿಗೆ 50ಲಕ್ಷ ರೂ. ತಾಲೂಕಿನ ಬ್ಯಾಕೋಡ-ಚಿಕ್ಕಸಿಂದಗಿ ರಸ್ತೆ ಬ್ರಿಡ್ಜ್ ನಿರ್ಮಾಣಕ್ಕೆ 1.40 ಕೋಟಿ ಮಂಜುರಾಗಿದೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ 23ಕೋಟಿ, ಪ್ರವಾಸೋದ್ಯಮ ಇಲಾಖೆಯಿಂದ ತಾಲೂಕಿನ ಯಂಕಂಚಿ ಮತ್ತು ಗೋಲಗೇರಿ ಗ್ರಾಮಗಳ ಅಭಿವೃದ್ಧಿಗೆ ತಲಾ 50 ಲಕ್ಷ ಅನುದಾನ, ಸಿಂದಗಿಯ ಪಜಾ ಮತ್ತು ಪಪಂ ಕಾಲೋನಿಯ ಮೂರು ಹಳ್ಳಿಗಳ ಅಭಿವೃದ್ಧಿಗೆ ತಲಾ 25ಲಕ್ಷ ಅನುದಾನ ನೀಡಲಾಗಿದೆ. ಆದಷ್ಟೂ ಬೇಗ ಆಲಮೇಲ ತೋಟಗಾರಿಕೆ ವಿವಿಗೆ ಮಂಜೂರು ಮಾಡಿ ಕೊಡುವುದಾಗಿ ಸಿಎಂ ಭರವಸೆ ನೀಡಿದ್ದಾರೆ. ಆಲಮೇಲ ತಾಲೂಕಿಗೆ ಒಳಪಟ್ಟ ಗುತ್ತರಗಿ, ಭಂಟನೂರ, ಕೆರೂರ ಮತ್ತು ಹಂಚಿನಾಳ ಗ್ರಾಮಗಳನ್ನು ಮತ್ತೇ ಸಿಂದಗಿ ತಾಲೂಕಿಗೆ ಸೇ-ರಿಸಲು ಸಚಿವರು ಭರವಸೆ ನೀಡಿದ್ದಾರೆ. ಸಿಂದಗಿಯಲ್ಲಿ ಜನಸಂಖ್ಯೆ ಹೆಚ್ಚಳದ ಪರಿಣಾಮವಾಗಿ ಒಂದು ಪೊಲೀಸ್ ಠಾಣೆ ಕಾರ್ಯನಿರತವಾಗಿದೆ. ಆದರೆ ಪಟ್ಟಣಕ್ಕೊಂದು ನಗರ ಪೊಲೀಸ್‌ಠಾಣೆ ನಿರ್ಮಾಣಕ್ಕಾಗಿ ಮನವಿ ಸಲ್ಲಿಸಲಾಗಿದೆ.

ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಯಲ್ಲಿ ಈ ಬಾರಿ ಸಿಂದಗಿ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಬಾವುಟ್ ಹಾರಿಸುವ ಇರಾದೆ ಇದೆ. ಸಿಂದಗಿ ತಾಲೂಕಿನಲ್ಲಿ ಒಟ್ಟು 12 ತಾಪಂ, ಆಲಮೇಲ ತಾಲೂಕಿನಲ್ಲಿ ಒಟ್ಟು 9ತಾಪಂ, 7 ಜಿಪಂ ಕ್ಷೇತ್ರಗಳಿವೆ. ತಾಪಂ ಮತ್ತು ಜಿಪಂ.ಗಳಲ್ಲಿ ಕಾಂಗ್ರೆಸ್ ಬಹುಮತದ ವಿಚಾರವಾಗಿ ಚುನಾವಣೆಯ ಪೂರ್ವದಲ್ಲಿ ಮುಖಂಡರ ಕಾರ್ಯಕರ್ತರ ಸಭೆಯನ್ನು ಫೆಬ್ರುವರಿಯಲ್ಲಿ ಕಾರ್ಯಾರಂಭ ಮಾಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಪರುಶುರಾಮ ಕಾಂಬಳೆ, ಅರವಿಂದ ಹಂಗರಗಿ, ಡಾ.ಶಿವಾನಂದ ಹೊಸಮನಿ, ಸಿದ್ದಣ್ಣ ಹಿರೇಕುರುಬರ, ಪ್ರವೀಣ ಕಂಟಿಗೊಂಡ, ಮಹಾನಂದಾ ಬಮ್ಮಣ್ಣಿ, ಎಸ್..ಬಿ.ಖಾನಾಪೂರ ಪ್ರಸನ್ನ ಜೇರಟಗಿ ಸೇರಿದಂತೆ ಪಕ್ಷದ ಮುಖಂಡರು ಕಾರ್ಯಕರ್ತರು ಇದ್ದರು.

# ಭಾರತ ಬಲಿಷ್ಠ ರಾಷ್ಟ್ರವಾಗಲು ಸಂವಿಧಾನ ಕಾರಣ

**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತ ಇತಿಹಾಸದಲ್ಲಿ ಗಣರಾಜ್ಯೋತ್ಸವ ದಿನವು ನಮಗೆ ಪ್ರಮುಖವಾದ ದಿನವಾಗಿದೆ. ಅಗಸ್ಟ್ 15 1947 ರಂದು ಬ್ರಿಟಿಷರಿಂದ ನಮಗೆ ತಾತ್ವಿಕವಾದ ಸ್ವತಂತ್ರ ಪಡೆದುಕೊಂಡ ದಿನವಾದರೆ ಈ ದಿನ ಜನೆವರಿ 26 1950 ರಂದು ಭಾರತ ತನ್ನ ಸಂವಿಧಾನವನ್ನು ಜಾರಿಗೆ ದಿನವಾಗಿದೆ ಎಂದು ಜಿಲ್ಲಾ ಬಿಜೆಪಿ ಮುಖಂಡರು ಬಗುರ್ ಹುಕುಂ ಮಾಜಿ ನಾಮ ನಿರ್ದೇಶನ ಸದಸ್ಯ ಯಾಸ್ಮಿನ್ ಭಾನು ನಾಯ್ಕೋಡಿ ಹೇಳಿದರು.



ರಾಜೀವ್ ಗಾಂಧಿ ಪ್ರೌಢಶಾಲೆ ಹೊನ್ನಳ್ಳಿಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, ರಾಜ್ಯ ಪ್ರಭುತ್ವವನ್ನ ತ್ಯಜಿಸಿ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡ ದಿನವಾಗಿದೆ. ಭಾರತ ತನ್ನದೇ ಆದ ಸಂವಿಧಾನ ಜಾರಿಗೆ ತರುತ್ತಿದ್ದಂತೆ ಗಣರಾಜ್ಯವಾಗಿ ಬದಲಾಯಿತು ಭಾರತವು ಉತ್ತಮ ಬಲಿಷ್ಠ ರಾಷ್ಟ್ರವಾಗಿ ನಿರ್ಮಾಣವಾಗಲು ನಮ್ಮ ದೇಶದ ಸಂವಿಧಾನವೇ ಪ್ರಮುಖ ಕಾರಣ ಅದಕ್ಕಾಗಿ ಹಗಲಿರುಳು ಶ್ರಮಿಸಿದ ಸವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ಅವರ ಕೊಡುಗೆಯನ್ನು ನಾವು ಸ್ಮರಿಸಬೇಕು ಎಂದರು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿತ್ತು. ಸಂವಿಧಾನ ಪೀಠಿಕೆಯ ಪ್ರತಿಜ್ಞಾವಿಧಿಯನ್ನು ಭೋದಿಸಲಾಯಿತು.

ವೇದಿಕೆ ಮೇಲೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸಂಗನಗೌಡ ಪಾಟೀಲ್, ಮುನಿರಾ ಬೇಗಮ ಮುರುಡಿ, ರಾಚನ ಗೌಡ ಪಾಟೀಲ ಬಿಜೆಪಿಯ ಮುಖಂಡರು ಅಧ್ಯಕ್ಷತೆಯನ್ನು ವಹಿಸಿದರು. ತಿಪ್ಪಯ್ಯ ನೆಲಗಿಮಠ, ಎ. ಆರ್. ಹತ್ತಿ ಮುಖ್ಯೋಪಾಧ್ಯಾಯರು, ಶಿಕ್ಷಕರಾದ ಮುಲ್ಲಾ, ಜಿ ಆರ್ ಪಾಟೀಲ, ಮಾಶಾಳ, ಶಿವು ಬಸ್ತಿಹಾಳ್, ಮುಂತಾದವರು ಉಪಸ್ಥಿತರಿದ್ದರು

# ಕರ್ನಾಟಕ ಸಂಭ್ರಮ-50: ಜ್ಯೋತಿ ರಥಯಾತ್ರೆಗೆ ಭವ್ಯ ಸ್ವಾಗತ

**ಉದಯರಶ್ಮಿ ನ್ಯೂಸ್**

ಆಲಮೇಲ: ಕರ್ನಾಟಕ ಸಂಭ್ರಮ-50 ರ ಅಂಗವಾಗಿ ಜ್ಯೋತಿ ರಥಯಾತ್ರೆಯು ಶನಿವಾರ ಬೆಳಗ್ಗೆ ಆಲಮೇಲ ತಾಲೂಕಿನ ದೇವಣಗಾಂವ ಗ್ರಾಮದ ಮೂಲಕ ಆಗಮಿಸಿತು.



ತಹಶೀಲ್ದಾರ ಸುರೇಶ ಚಾವಲರ ನೇತೃತ್ವದಲ್ಲಿ ತಾಲೂಕು ಆಡಳಿತ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು, ಗ್ರಾಮಸ್ಥರು ಸೇರಿದಂತೆ ವಾದ್ಯ ವೈಭವ ಮತ್ತು ವಿವಿದ ಕಲಾ ತಂಡಗಳೊಂದಿಗೆ ಅದ್ದೂರಿ ಸ್ವಾಗತಿಸಿ ಬಿಳ್ಕೊಟ್ಟರು.

ಶನಿವಾರ ಬೆಳಗ್ಗೆ 9 ಗಂಟೆಗೆ ತಾಲೂಕಿನ ದೇವಣಗಾಂವ ಗ್ರಾಮಕ್ಕೆ ಆಗಮಿಸಿತು. ತಹಶೀಲ್ದಾರ ಸುರೇಶ ಚಾವಲಾರ ನೇತೃತ್ವದ ತಾಲೂಕ ಆಡಳಿತ ಮತ್ತು ದೇವಣಗಾಂವ ಗ್ರಾಮಸ್ಥರು ಶಾಲಾ ಕಾಲೇಜ ವಿದ್ಯಾರ್ಥಿಗಳ ನೇತೃತ್ವದಲ್ಲಿ ಸ್ವಾಗತಿಸಿ ಬಿಳಕೊಟ್ಟರು. ನಂತರ 11-30 ಗಂಟೆಗೆ ಆಲಮೇಲ ಪಟ್ಟಣಕ್ಕೆ ಆಗಮಿಸಿತು. ಬಡದಾಳ ಪೆಟ್ರೋಲ ಬಂಕ್ ಹತ್ತಿರ ತಾಲೂಕು ಆಡಳಿತದೊಂದಿಗೆ ಎಲ್ಲ ಶಾಲಾ ಕಾಲೇಜ ವಿದ್ಯಾರ್ಥಿಗಳು, ಗ್ರಾಮಸ್ಥರು, ಜನಪ್ರತಿನಿಧಿಗಳು ಸಕಲ ವಾದ್ಯ ವೈಭವ, ಡೊಳ್ಳು ಕುಣಿತ, ಮಕ್ಕಳ ಕೋಲಾಟ ನೃತ್ಯ, ಮಕ್ಕಳ ಚದ್ಮ ವೇಶದಾರಿಗಳಿಂದ ಕಲಾ ನೃತ್ಯ ರೂಪಕದ ಮೂಲಕ ಅದ್ದೂರಿಯಾಗಿ ಸ್ವಾಗತಿಸಿದರು.

ಸುಮಾರು ಎರಡು ಗಂಟೆವರೆಗೂ ಅದ್ದೂರಿಯಾಗಿ ಮೆರವಣಿಗೆ ಮೂಲಕ ಕರ್ನಾಟಕ ಜ್ಯೋತಿ ಯಾತ್ರೆ ಸ್ವಾಗತಿಸಿ ಬಿಳ್ಕೊಟ್ಟರು.

ನಂತರ ತಾಲೂಕಿನ ಕೋರಹಳ್ಳಿ ಗ್ರಾಮದ ಮೂಲಕ ತಾಲೂಕ ಆಡಳಿತ ಮತ್ತು ಕೋರಳ್ಳಿ ಗ್ರಾ.ಪಂ ಅಧ್ಯಕ್ಷರು ಹಾಗೂ ಗ್ರಾಮಸ್ಥರು, ಶಾಲಾ ಕಾಲೇಜ ವಿದ್ಯಾರ್ಥಿಗಳು ಸ್ವಾಗತಿಸಿ ಸಿಂದಗಿ ತಾಲೂಕಿಗೆ ಬೀಳ್ಕೊಡಲಾಯಿತು.

ತಹಶೀಲ್ದಾರ ಸುರೇಶ ಚಾವಲಾರ, ಪಿಎಸ್‌ಐ ಕುಮಾರ ಹಾಡಕರ, ಪ.ಪಂ ಮುಖ್ಯಾಧಿಕಾರಿ ಸುರೇಶ ನಾಯಕ, ಕಂದಾಯ ನಿರಿಕ್ಷಕ ಎಂ.ಎ. ಅತ್ತಾರ, ಉಪ ತಹಶೀಲ್ದಾರ ಎಂ.ಕೆ. ಮೋಕಿಹಾಳ ಸೇರಿದಂತೆ ಪ.ಪಂ ಸದಸ್ಯರು ವಿವಿದ ಪಕ್ಷದ ರಾಜ-ಕೀಯ ಮುಂಡರು ಶಾಲಾ ಮಕ್ಕಳು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಉದಯರಶ್ಮಿ ನೀವೂ ಬರೆಯಿರಿ..

ನಿಮ್ಮೂರಿನ, ನಿಮ್ಮ ಸುತ್ತಮುತ್ತಲಿನ ಸಮಸ್ಯೆಗಳ ಮೇಲೆ ನೀವೂ ಬೆಳಕು ಚೆಲ್ಲಬಹುದು, ಸಾಮಾಜಿಕ ಸಮಸ್ಯೆಗಳು ಹಾಗೂ ಮಾನವಿಯ ಕಳಕಳಿಯ ಬರಹಗಳನ್ನು ಸಂಬಂಧಿಸಿದ ಫೋಟೊದೊಂದಿಗೆ ನಮಗೆ ಕಳುಹಿಸಿ, 'ಉದಯರಶ್ಮಿ' ದಿನಪತ್ರಿಕೆಯಲ್ಲಿ ಆದ್ಯತೆಯ ಮೇಲೆ ಪ್ರಕಟಿಸಲಾಗುವುದು.

– ಸಂಪಾದಕ

ಇಲ್ಲಿ ಕಳುಹಿಸಿ.. email: editor.udayarashmi@gmail.com

# ಓಂ ಶಾಲೆಯಲ್ಲಿ 75ನೇ ಗಣರಾಜ್ಯೋತ್ಸವ




ಉದಯರಶ್ಮಿ ನ್ಯೂಸ್

ಚಡಚಣ: ಕೇಂದ್ರ ಹಾಗೂ ರಾಜ್ಯ ಸರಕಾರಗಳ ಎ▯▯▯ಪಿ ಹಾಗೂ ಎಸ್ಇಪಿ ಗಳ ನಿಲುವು ಮಕ್ಕಳ ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ ಮಕ್ಕಳ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕೆಂದು ಶಿಕ್ಷಣ ಪ್ರೇಮಿ ಮಹೇಶ ಗುಮಾಸ್ತೆ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಓಂ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾದ 75 ನೇ ಗಣ-ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧ್ವಜಾರೋಹಣ ನೆರವೇರಿಸಿದ ಸಿಪಿಐ ಸುರೇಶ ಬೆಂಡಗುಂಬಳ ಮಾತನಾಡಿ, ಶಾಲಾ-ಕಾಲೇಜುಗಳಲ್ಲಿ ಗಣರಾಜ್ಯೋತ್ಸವ ದಿನವನ್ನು ಅತ್ಯಂತ ಉತ್ಸಾಹ ಮತ್ತು ದೇಶಭಕ್ತಿಯ ಭಾವನೆಗಳಿಂದ ಆಚರಿಸಲಾಗುತ್ತದೆ. ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು, ಭಾಷಣಗಳು, ಪ್ರಬಂಧ ಸ್ಪರ್ಧೆ, ಇತರೆ ಚಟುವಟಿ-ಕೆಗಳೊಂದಿಗೆ ಈ ದಿನವನ್ನು ಸ್ಮರಣೀಯವಾಗಿಸಲಾಗುತ್ತದೆ ಎಂದರು.

ಈ ಕಾರ್ಯಕ್ರಮದಲ್ಲಿ ವಕೀಲ ನಾನಾಗೌಡ ಸೂರಗೊಂಡ, ಡಾ. ಮಹೇಶ ಮುರಗೊಂಡೆ, ಓಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್ ಎಸ್ ಹಾವಿನಾಳ, ಮುಖ್ಯ ಶಿಕ್ಷಕ ಸುರೇಶ ಜಂತಿ, ಶಿಕ್ಷಕರಾದ ಪಿ ಎಚ್ ಪೂಜಾರಿ, ಎಮ್ ಎನ್ ಚೌವ್ಹಾಣ, ಸಂಗೀತಾ ಬಣಗಾರ, ಅರ್ಪಿತಾ ಭಂಡರಕವಟೆ, ಪ್ರಿಯಾಂಕಾ ಅಂಜುಟಗಿ, ಆರಿಫ ಕೋತ್ವಾಲ, ಭೀಮವ್ವಾ ಮಡ್ಡಿ, ಲಕ್ಷ್ಮೀ ಕುಂಬಾರ, ಕೋಳಿ, ಮಲ್ಲು ಮಸಳಿ, ನಾಗು ಕಲ್ಮನಿ, ವಿನಾಯ ಜೀರಂಕಲಗಿ ಸೇರಿದಂತೆ ಪೋಷಕರು ಉಪಸ್ಥಿತರಿದ್ದರು.

# ದೇವರಹಿಪ್ಪರಗಿಯ ವಿವಿಧೆಡೆ ಗಣರಾಜ್ಯೋತ್ಸವ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಪಟ್ಟಣದ ಸಂಘ ಸಂಸ್ಥೆಗಳು, ಅಂಚೆಕಚೇರಿ ಸೇರಿದಂತೆ ವಿವಿಧೆಡೆ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಸಮೃದ್ಧಿ ಸಹಕಾರ ಸಂಘ:ಸ್ಥಳೀಯ ಸಮೃದ್ಧಿ ಸಹಕಾರ ಸಂಘದಲ್ಲಿ ಅಧ್ಯಕ್ಷೆ ಸಂಗೀತಾ ನಾಯಿಕ್ ರಾಷ್ಟ್ರನಾಯಕರ ಭಾವಚಿತ್ರಕ್ಕೆ ಪೂಜೆ ಹಾಗೂ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು.

ಈ ಸಂದರ್ಭದಲ್ಲಿ ಹಿರಿಯವೈದ್ಯ ಆರ್.ಆರ್.ನಾಯಿಕ್, ಉಪಾಧ್ಯಕ್ಷ ರಿಂಯಾಜ್ ಯಂಲಗಾರ, ನಿರ್ದೇಶಕರುಗಳಾದ ವೆಂಕಟೇಶ ಕುಲಕರ್ಣಿ, ಬಸವರಾಜ ಬಬಲೇಶ್ವರ, ಕೆ.ಎಸ್.ಕೋರಿ, ಉಮೇಶ ಹಳಪಾಣಿ, ಎ.ಕೆ.ಹಿರೇಮಠ, ಸಿಬ್ಬಂದಿ ಬಸವರಾಜ ಸಜ್ಜನ, ಲತಾ ತಡಪಟ್ಟಿ, ಅಕ್ಷಯ ರಾಠೋಡ, ಬಸವರಾಜ ಹಿರೇಮಠ ಹಾಜರಿದ್ದರು.

ಅಂಚೆ ಕಚೇರಿ: ಪಟ್ಟಣದ ಪೋಸ್ಟ ಮಾಸ್ಟರ್ ಪಿ.ಆರ್.ದೊಡಮನಿ ಧ್ವಜಾರೋಹಣ ನೆರವೇರಿಸಿದರು. ವಿಶ್ರಾಂತ ಪ್ರಾಂಶುಪಾಲ ರುದ್ರಪ್ಪ ದೊಡಮನಿ ಮಾತನಾಡಿದರು.

ಅಂಚೆ ಉಪಪಾಲಕ ಪೂಜಾರಿ, ವೆಂಕಟೇಶ ಕುಲಕರ್ಣಿ, ರಾಮನಗೌಡ ಬಿರಾದಾರ, ಪ್ರವೀಣ ಕುಲಕರ್ಣಿ, ಎಸ್.ಡಿ.ತಳವಾರ, ಎಲ್. ಎಚ್.ನದಾಫ್, ಪ್ರವೀಣ ಮಾಳೇಗಾರ, ಪಿ.ಎಸ್.ಕೆಂಭಾವಿ. ಮಲ್ಲಿಕಾರ್ಜುನ ಪಾಟೀಲ, ರಂಜೀತ ತಳಕೇರಿ, ಸಂಜಯ, ನಯನ ಯಡಹಳ್ಳಿ, ಎಸ್.ಆರ್.ಬಿರಾದಾರ, ಭಾಗ್ಯ ಪುರವಂತಮಠ ಇದ್ದರು.

ನಿವೃತ್ತ ನೌಕರರ ಸಂಘ: ಪಟ್ಟಣದ ಸದಯ್ಯನಮಠದಲ್ಲಿ ನಿವೃತ್ತ ನೌಕರರ ಸಂಘದ ಧ್ವಜಾರೋಹಣವನ್ನು ತಾಲ್ಲೂಕು ಅಧ್ಯಕ್ಷ ಸಿ.ಕೆ.ಕುದರಿ ನೆರವೇರಿಸಿದರು.

ಪಿ.ಜಿ.ಹಿರೇಮಠ, ಪಿ.ಎಸ್. ಮಿಂಚನಾಳ, ಎಸ್.ಎಮ್.ಯರನಾಳ, ಎಸ್.ಜಿ.ತಾವರಖೇಡ, ಬಸವರಾಜ ಬಬಲೇಶ್ವರ, ಬಿ.ಎಂ.ಕಠಾರಿ, ಎಸ್. ಎಂ.ಇಂಡಿ, ಜಿ.ಎ.ಪಾಟೀಲ, ಕೆ.ಸಿ.ಮಠ, ಎಂ.ಆರ್.ಶಿರಸಂಗಿಮಠ ಸೇರಿದಂತೆ ಇತರರು ಇದ್ದರು.

ಯಾಳವಾರ ಶ್ರೀಸೋಮೇಶ್ವರ ಸಂ.ಪ.ಪೂ ಕಾಲೇಜು ಹಾಗೂ ಪ್ರೌಢಶಾಲೆ: ಸಂಘದ ಅಧ್ಯಕ್ಷ ರಾಜುಗೌಡ ನಾಡಗೌಡ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಎಸ್.ನ್ಯಾಮಣ್ಣವರ, ಎಸ್.ಎನ್. ಥಬಣ್ಣವರ, ನಿರ್ದೇಶಕರಾದ ಆರ್. ಎಸ್.ಪಾಟೀಲ, ಎ.ಡಿ.ನಾಗರಾಳ, ಮುಖ್ಯಗುರು ಪಿ.ಎಸ್.ಬ್ಯಾಕೋಡ, ಬಿ.ವೈ.ಭಂಟನೂರ, ಶಿವರಾಜ್ ನಾಗರಳ್ಳಿ, ಎಂ.ಎಸ್.ಬಾಗೇವಾಡಿ ಸೇರಿದಂತೆ ವಿದ್ಯಾರ್ಥಿಗಳು, ಸಿಬ್ಬಂದಿ ಇದ್ದರು.



# ಹಿಟ್ನಳ್ಳಿ ಶಾಲೆಯಲ್ಲಿ ಗಣರಾಜ್ಯೋತ್ಸವ



ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ತನು,ಮನ, ಧನಗಳಿಂದ ತ್ಯಾಗ ಬಲಿದಾನ ಮಾಡಿದ ಮಹಾನ ನಾಯಕರು ಹಾಗೂ ದೇಶಾಭಿಮಾನಿಗಳ ಆಶಯದಂತೆ ನಮ್ಮ ರಾಷ್ಟ್ರವನ್ನು ಅಭಿವೃದ್ಧಿ ಪಥ-'ದಲ್ಲಿ ಮುನ್ನಡೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ನಿವೃತ್ತ ಅಭಿಯಂತರ ಸಿ.ಡಿ.ರಾಠೋಡ ಹೇಳಿದರು.

ತಾಲ್ಲೂಕಿನ ಹಿಟ್ನಳ್ಳಿ ತಾಂಡಾದ ಶಾಸಕರ ಮಾದರಿ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ 75 ನೇ ಗಣರಾಜ್ಯೋತ್ಸವದ ಅಂಗವಾಗಿ 'ವಿಶ್ರಾಂತ ನೌಕರರಿಗೊಂದು ವಿನಮ್ರತೆಯ ಗೌರವ' ಸಮಾರಂಭದ ಅತಿಥಿಯಾಗಿ ಮಾತನಾಡಿದರು.

ವೇದಿಕೆಯಲ್ಲಿ ನಿವೃತ್ತರಾದ ಜಗದಂಬಾ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಿ.ಬಿ.ಅಂಗಡಿ, ಡಿ.ಜಿ. ದೊಡಮನಿ, ಡಿ.ಪಿ.ದೊಡಮನಿ, ಡಿ.ಕೆ.ನಾಯಿಕ, ಎಲ್.ಬಿ.ಮಂಜಿ, ವ್ಹಿ.ಟಿ.ರಾಠೋಡ, ವಾಂಯ್. ಎಮ್.ಹಿರೇಕುರುಬರ, ಎ.ಆಯ್. ಮುಲ್ಲಾ, ಎಮ್.ಬಿ.ಅಂಗಡಿ, ಎ.ಆರ್.ನಾಯಿಕ, ಕಸ್ತೂರಿಬಾಯಿ ದೊಡಮನಿ, ವ್ಹಿ.ಆರ್.ಅಂಗಡಿ, ಎನ್. ಎಲ್.ಅಂಗಡಿ, ಎಮ್.ಬಿ.ದೊಡಮನಿ, ಬಿ.ಜಿ.ನಾಯಕ, ಪಿ.ಟಿ.ನಾಯಿಕ, ಡಿ. ಎಚ್.ಚವ್ಹಾಣ ಸೇರಿದಂತೆ 60 ಕ್ಕೂ ಹೆಚ್ಚು ನಿವೃತ್ತ ನೌಕರರು, ಶಾಲೆಗೆ ದೇಣಿಗೆ ನೀಡಿದವರು ಹಾಗೂ ಗ್ರಾಮ ಪಂಚಾಯತಿ ಸದಸ್ಯರನ್ನು ಸನ್ಮಾನಿಸಲಾಯಿತು.

ಶಾಲೆಯ ಮುಖ್ಯಗುರು ಡಿ.ಸಿ.ಲಮಾಣಿ, ಸಿಆರ್‌ಸಿ ಕಸ್ತೂರಿ ಬಡದಾಳ, ಶಿಕ್ಷಕ ಸಿಬ್ಬಂದಿ ಆಶಾ ರಾಠೋಡ ಆರ್.ಆರ್.ಚವ್ಹಾಣ ಸಿಬ್ಬಂದಿ ಹಾಗೂ ಎಸ್.ಡಿ.ಎಮ್.ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಬಾಗವಹಿಸಿದ್ದರು.

# ಚಂದ್ರಶೇಖರ ಶಿವಾಚಾರ್ಯರಿಗೆ ಅದ್ದೂರಿಯ ಸ್ವಾಗತ

ಉದಯರಶ್ಮಿ ನ್ಯೂಸ್

ಆಲಮೇಲ: ಅಯೋಧ್ಯೆ ಶ್ರೀರಾಮ ಮಂದಿರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಂದಂತಹ ಆಲಮೇಲದ ಶ್ರೀ ಗುರು ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರಿಗೆ ವಿಶ್ವ ಹಿಂದೂ ಪರಿಷತ್, ಗ್ರಾಮಸ್ಥರು, ಶ್ರೀ ಮಠದ ಭಕ್ತರು ಶನಿವಾರ ಅದ್ದೂರಿ ಸ್ವಾಗತ ಕೋರಿದರು.



ಇದೇ ಜ. 22 ರಂದು ಅಯೋಧ್ಯೆ ಶ್ರೀ ರಾಮಮಂದಿರದ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಆಲಮೇಲದ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರಿಗೆ ಅಯೋಧ್ಯೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಾಗೂ ವಿಶ್ವ ಹಿಂದೂ ಪರಿಷತ್ ಆಹ್ವಾನದ ಮೇರೆಗೆ ಅಯೋಧ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶನಿವಾರ ಆಲಮೇಲ ಪಟ್ಟಣಕ್ಕೆ ಆಗಮಿಸಿದ ಅವರಿಗೆ ಅದ್ದೂರಿ ಸ್ವಾಗತ ಕೋರಿದರು.

ಯಕಂಚಿಯ ಅಭಿನವ ರುದ್ರಮುನಿ ಶಿವಾಚಾರ್ಯರು, ತಡವಾಳದ ರಾಚೋಟೇಶ್ವರ ಶಿವಾಚಾರ್ಯರು, ಗುರಲಿಂಗ ಶಿವಾಚಾರ್ಯರು, ಕುಮಸಗಿ ಶಿವಾನಂದ ಶಿವಾಚಾರ್ಯರು ಮುಂತಾದ ಪೂಜ್ಯರ ನೇತೃತ್ವದಲ್ಲಿ ಸ್ವಾಗತಿಸಿ ಪಟ್ಟಣದ ಆಂಜನೆಯ ದೇವಸ್ಥಾನದಿಂದ ಮೆರವಣಿಗೆ ಮೂಲಕ ಹಿರೇಮಠಕ್ಕೆ ಕರೆತರಲಾಯಿತು.

# ಆಲಮೇಲ: ಅಲ್ಲಲ್ಲಿ ಸಡಗರದ ಗಣರಾಜ್ಯೋತ್ಸವ

ಉದಯರಶ್ಮಿ ನ್ಯೂಸ್



ಆಲಮೇಲ: ಪಟ್ಟಣದ ಸಂಗನಬಸವೇಶ್ವರ ಶಾಲೆಯಲ್ಲಿ ರಾಜ-ಕಿಯ ಮುಖಂಡರಾದ ಸೋಮನಾಥ ಮೇಲಿಮನಿ ದ್ವಜಾರೋಹಣ ನೇರವೇ-ರಿಸಿದರು. ನಿತ್ಯಾನಂದ ಆರೋಢ ಮಠದ ಬಸವಲಿಂಗ ಶರಣರು, ಪ.ಪಂ ಸದಸ್ಯ ಅಶೋಕ ಕೊಳಾರಿ, ಬಸವರಾಜ ತೆಲ್ಲೂರ, ಯಲ್ಲಪ್ಪ ಬುರಡ, ಶ್ರೀಶೈಲ ಕುಂಬಾರ, ಬಾಬು ಕೊತಂಬರಿ, ಆನಂದ ಬುರಡ,ದಯಾನಂದ ಪುರಾಣಿಕ, ಶ್ರೀಮಂತ ಹಿರೇಗೌಡ, ಮುಖ್ಯ ಶಿಕ್ಷಕ ಸಂಜುಕುಮಾರ ಇಟಗಾರ, ಶಿಕ್ಷಕ ಉಮೇಶ ಕುಂಬಾರ ಉಪಸ್ತಿತರಿದ್ದರು.

ಐ.ಕೆ. ರಾಯಲ್ ಶಾಲೆ: ಪಟ್ಟಣದ ಐ.ಕೆ. ರಾಯಲ ಶಾಲೆಯಲ್ಲಿ ಶಾಲಾ ಆಡಳಿಮಂಡಳಿ ನಿರ್ದೇಶಕ ಶೌಕತಲಿ ಸುಂಬಡ ದ್ವಜಾರೋಹಣ ಮಾಡಿದರು.

ಮುಖ್ಯ ಶಿಕ್ಷಕ ಸಂತೋಷ ಚಂಗಟ್ಟಿ, ಶಿಕ್ಷಕರಾದ ಸಂಜನಾ ಬೇನುರ, ರಕ್ಷಿತಾ ಅಂಬುರೆ, ಸಂಗೀತಾ, ರೋಜಿ, ಶ್ರೀಕಾಮತರ ಸಿಬರಾಮ ಮುಂತಾದವರು ಉಪಸ್ಥಿತರಿದ್ದರು.

ಹೂವಿನಹಳ್ಳಿ ತಾಲೂಕಿನ ಹೂವಿನಹಳ್ಳಿ ಗ್ರಾಮದ ಅಂಬೇಡ್ಕರ ನಗರದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಶರಣು ಸಿಂಧೆ ದ್ವಜಾರೋಹಣ ಮಾಡಿದರು.

ಮುಖ್ಯ ಶಿಕ್ಷಕ ಪಂಡಿತ ಅವಜಿ ಶಾಲಾ ಸಿಬ್ಬಂದಿ ಹಾಗೂ ಪಾಲಕರು ಇದ್ದರು.

# ದೇವಣಗಾಂವದಲ್ಲಿ ಗಣರಾಜ್ಯೋತ್ಸವ

ಉದಯರಶ್ಮಿ ನ್ಯೂಸ್

ಆಲಮೇಲ: ತಾಲೂಕಿನ ದೇವಣಗಾಂವ ಗ್ರಾಮದ

ಮಾತೃಭೂಮಿ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ದಿ ಮಹಿಳಾ ಸಂಸ್ಥೆಯ ಕದಂಬ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಧ್ವಜಾರೋಹಣವನ್ನು ದೇವಣಗಾಂವ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಸದಸ್ಯರಾದ ಶ್ರೀ ಚಿನ್ನವ್ವ ಗುಂಡಪ್ಪ ಗಂಗನಳ್ಳಿ ನೆರವೇ-ರಿಸಿದರು.

ಹಿರಿಯರಾದ ಸಿದ್ದಯ್ಯ ಮಠಪತಿ, ಪಂಪುಸಿಂಗ್ ರಜಪುತ, ಷಣ್ಮುಖಪ್ಪ ಸೋಮನಾಯಕ, ವಿಠ್ಠಲ ಯರಗಲ್, ರಮೇಶ ಸೊಡ್ಡಿ, ಚಂದ್ರಾಮ ಸಿಂದಗಿ, ಶಂಕರಲಿಂಗ ನಡುವಿನಕೇರಿ, ಸಿದ್ದಾರ್ಥ ಮೇಲಿನಕೇರಿ, ಮಾಣಿಕ ಕಲಬಾ, ಪ್ರಕಾಶ ಗಂಗನಳ್ಳಿ, ದತ್ತಾತ್ರೇಯ ಸೊನ್ನ, ಶಿವಾನಂದ ನಾಗಾವಿ, ಶಿವು ಕಾಟಕರ ಇದ್ದರು.



# ಕೆಂಭಾವಿ: ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ

ಉದಯರಶ್ಮಿ ನ್ಯೂಸ್



ಕೆಂಭಾವಿ: ಪಟ್ಟಣದ ಹಳೆ ಬಸ್ ಸ್ಟ್ಯಾಂಡ್ ಹತ್ತಿರ ಜ.26ರಂದು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ನೂತನ ಪುತ್ಥಳಿ ಅನಾವರಣ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಾನಿಧ್ಯವನ್ನು ಬಂತೆ ದಮ್ಮಾನಂದ ಮಾಹಾತೇರ ಬೀದರ ಇವರು ವಹಿಸಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸಿದ್ದನಗೌಡ ಪೋಲೀಸ್ ಪಾಟೀಲ್ ಉದ್ಘಾಟಿಸಿ, ಮಾತನಾಡಿ, ಎಲ್ಲಾ ಶೋಷಿತ ವರ್ಗದವರಿಗೆ ನ್ಯಾಯುತವಾದ ಹಕ್ಕುಗಳನ್ನು ಕೊಡಿಸುವುದರಲ್ಲಿ ಅಂಬೇಡ್ಕರ್ ಅವರೇ ಮುಂಚೂಣಿ ನಾಯಕರು. ಅವರು ಸಂವಿಧಾನ ರಚನೆಗೆ ಎರಡು ವರ್ಷ 11 ತಿಂಗಳನ್ನು 18 ದಿವಸ ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟವರು. ನಾವೆಲ್ಲರೂ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ವಾಮನರಾವ ದೇಶಪಾಂಡೆ. ಅಶೋಕ್ ಸೊನ್ನದ. ಶಿವನಗೌಡ ಮಾಲಿ ಪಾಟೀಲ್. ಸುಧಾಕರ್ ಡಿಗ್ಗಾವಿ. ಕೃಷ್ಣಯ್ಯ ಗುತ್ತೇದಾರ್. ರೈಮನ್ ಪಟೇಲ್ ಯಲ್ಗೋಡ. ಲಕ್ಷ್ಮೀಬಾಯಿ ಕಂಬಾರ. ಮಲ್ಲಿಕಾರ್ಜುನ್ ಪಾಟೀಲ್, ಉಪ ತಹಶೀಲ್ದಾರ್ ಲಾಲಪ್ಪ ಹೊಸ್ಮನಿ. ಬಸವರಾಜ್ ಮಲ್ಲೆ, ಮಲ್ಲಿಕಾರ್ಜುನ ಕಡಕಲ, ಶಿವಶರಣಪ್ಪ ವಾಡಿ, ಶರಣು ಹೂನಹಳ್ಳಿ, ಧರ್ಮಣ್ಣ ಬಡಿಗೇರ್ ಸೇರಿದಂತೆ ಹಲವರಿದ್ದರು.

ನಿರೂಪಣೆ ಶರಣಪ್ಪ ಗಾಯಕ್ವಾಡ ಮಾಡಿದರು. ಸ್ವಾಗತವನ್ನು ರಾಯಪ್ಪ ಕಡಕಲ್ ಮಾಡಿದರು. ವಂದನಾರ್ಪಣೆಯನ್ನು ಬಸವಣ್ಣಪ್ಪ ಆರ್ ಮಾಳಳ್ಳಿಕರ್ ಮಾಡಿದರು.

# ಇಂಡಿಯಲ್ಲಿ ಸಂಭ್ರಮದ ಅಂಬಾಭವಾನಿ ಮಹೋತ್ಸವ

ಉದಯರಶ್ಮಿ ನ್ಯೂಸ್

ಇಂಡಿ: ಪಟ್ಟಣದ ಶ್ರೀ ಅಂಬಾಭವಾನಿ ದೇವಸ್ಥಾನದ 31 ನೇ ವರ್ಷದ ಪ್ರಾಣ ಪ್ರತಿಷ್ಠಾಪನೆ ಮಹೋತ್ಸವ ವಿಜೃಂಜಣೆಯಿಂದ ಜರುಗಿತು.

ಬೆಳಗ್ಗೆ ದೇವಿಗೆ ಆರತಿ, ಅಲಂಕಾರ, ಪೂಜೆ, ಅಭಿಷೇಕ ನಡೆಯಿತು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಿಯ ಭವ್ಯ ಮೆರವಣಿಗೆ ನಡೆಯಿತು.

ಡೊಳ್ಳು, ಬಾಜಾ-ಭಜಂತ್ರಿ, ಚಿಟ್ಟಲಗಿ, ಸಂಬಳ ಸಮೇತ ಆಕರ್ಷಕ ಮೆರವಣಿಗೆ ಅಲಂಕೃತ ವಾಹನದಲ್ಲಿ ದೇವಿಯ ಮೂರ್ತಿ ಮತ್ತು ಪಾಲಕಿ ಮೆರವಣಿಗೆ ನಡೆಯಿತು.

ಮೆರವಣಿಗೆಯಲ್ಲಿ ಆಯಿ ರಾಧೇ ಉದೋ ಉದೋ, ಅಂಬಾಭವಾನಿ ಉಧೋ ಉಧೋ ಘೋಷಣೆ ಮೊಳಗಿದವು.




ನಂತರ ನಡೆದ ಸಮಾರಂಭದಲ್ಲಿ ದಾನಿಗಳಾದ ಬಾಲಾಜಿ ಇಫ್ ಕ್ವಾಯಿಲ್ ಮತ್ತಿತರನ್ನು ಸನ್ಮಾನಿಸಲಾಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಅರುಣ ಕೋಳೆಕರ, ಗಣೇಶ ಮಹೀಂದ್ರಕರ, ಬಾಪು ಮಹೀಂದ್ರಕರ, ವಿಜಯ ಪತಂಗೆ, ಸುಭಾಸ ಬಳಮಕರ, ನಾಗನಾಥ ಹಂಚಾಟೆ, ರಮಾಕಾಂತ ಕೋಳೆಕರ, ಮನೋಜ ಕೋಳೆಕರ, ಬಾಬುರಾವ ಸುಲಾಖೆ, ರಮೇಶ ಸುಲಾಖೆ, ನಂದು ಸುಲಾಖೆ, ಡಾ॥ ರಾಜೇಶ ಕೋಳೆಕರ, ಕಿರಣ ಬಳಮಕರ, ಶಿವಾಜಿ ಕೋಳೆಕರ, ರಮೇಶ ಹಂಚಾಟೆ, ಶಶಿಕಾಂತ ಮಹಿಂದ್ರಕರ, ಅಂಬಾದಾಸ ಮಿರಜಕರ, ಇಂಜಿಯರಿಂಗ ಮಹಾವಿದ್ಯಾಲಯದ ಪ್ರಾಚಾರ್ಯ ಶ್ರೀಧರ ಕೋಳೆಕರ ಮತ್ತಿತರಿದ್ದರು.

**ಜ.30ರಂದು 30 ಪುಸ್ತಕಗಳ ಲೋಕಾರ್ಪಣೆ । ಬೆರಗು ಪ್ರಶಸ್ತಿ ಪ್ರದಾನ**

# ಕಡಣಿಯಲ್ಲಿ ಸಾಹಿತ್ಯಿಕ ಕ್ಷೇತ್ರದ ಮೈಲಿಗಲ್ಲು!

**ಉದಯರಶ್ಮಿ ನ್ಯೂಸ್**




ಆಲಮೇಲ: ತಾಲ್ಲೂಕಿನ ಕಡಣಿ ಗ್ರಾಮದ ಬೆರಗು ಪ್ರಕಾಶನ ಸಂಸ್ಥೆಯು ಪ್ರಕಟಿಸಿದ 30 ಪುಸ್ತಕಗಳ ಲೋಕಾರ್ಪಣೆ ಹಾಗೂ ಬೆರಗು ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಜ್ಞಾನಯೋಗಿ ಶ್ರೀಸಿದ್ದೇಶ್ವರ ಶ್ರೀಗಳ ಸಂಸ್ಮರಣಾರ್ಥ ಜ.30 ರಂದು ಕಡಣಿ ಗ್ರಾಮದ ಪಿ.ಬಿ.ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದೆ.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಮಹೇಶ ಜೋಶಿ ಅವರು ಪುಸ್ತಕಗಳನ್ನು ಲೋಕಾರ್ಪಣೆ ಮಾಡುವರು. ಬೆರಗು ಪ್ರಶಸ್ತಿಗಳನ್ನು ಬೆಂಗಳೂರು ವೀರಲೋಕ ಪಕಾಶನದ ವೀರಕಪುತ್ರ ಶ್ರೀನಿವಾಸ ಅವರು ಬೆರಗು ಸಮಗ್ರ ಸಾಹಿತ್ಯ ಪ್ರಶಸ್ತಿ ಪಡೆದ ಡಾ.ಸಂಗಮನಾಥ ಲೋಕಾಪೂರ ಅವರಿಗೆ ಹಾಗೂ ದಿ.ಯಮುನಾಬಾಯಿ ರಾಜಣ್ಣ ಭೋವಿ ದತ್ತಿ ಪುಸ್ತಕ ಪ್ರಶಸ್ತಿ ಪಡೆದ ಕಲಬುರಗಿಯ ಡಾ. ಲಕ್ಷ್ಮಣ ಕೌಂಟೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಸಿಂದಗಿ ಶಾಸಕ ಅಶೋಕ ಮನಗೂಳಿ ಕಾರ್ಯಕ್ರಮ ಉದ್ಘಾಟಿಸುವರು. ಗುಲಬರ್ಗಾ ವಿವಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್. ಟಿ.ಪೋತೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಶ್ರೀಶೈಲ ನಾಗರಾಳ ಪುಸ್ತಕ ಪರಿಚಯಿಸಲಿದ್ದಾರೆ, ಜಿಲ್ಲಾ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲೀಕಾರ, ಕಡಣಿ ಗ್ರಾಮ ಪಂಚಾಯತಿ ಅಧ್ಯಕ್ಷ ಬಸಲಿಂಗಪ್ಪ ಕತ್ತಿ ಮುಖ್ಯ ಅತಿಥಿಗಳಾಗಿದ್ದಾರೆ. ವಿವಿಧ ಗ್ರಂಥಗಳಿಗೆ ಗ್ರಂಥ ದಾನ ಮಾಡಿದ ದಾನಿಗಳನ್ನು, ಪುಸ್ತಕಗಳ ಲೇಖಕರನ್ನು, ಕಲಾವಿದರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಗುತ್ತದೆ.

ವಿವಿಧ ಸಾಹಿತ್ಯ ಪ್ರಕಾರಕ್ಕೆ ಸೇರಿದ 21 ಪುಸ್ತಕಗಳು ಹಾಗೂ ನಾವು–ನಮ್ಮ ಸಾಧಕರ ಮಾಲೆಯ 9 ಪುಸ್ತಕಗಳು ಹಾಗೂ ಎರಡು ಕನ್ನಡ ಸಾಹಿತ್ಯದ ಇಂಗ್ಲೀಷ್ ಪುಸ್ತಕಗಳು ಬಿಡುಗಡೆಗೆ ಸಜ್ಜಾಗಿವೆ ಎಂದು ಬೆರಗು ಪ್ರಕಾಶನ ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಆರ್. ಕತ್ತಿ ತಿಳಿಸಿದ್ದಾರೆ.

ನಾವು ನಮ್ಮ ಸಾಧಕರ ಮಾಲೆ : ಮೊದಲಿನ ಎರಡು ಆವೃತ್ತಿಗಳಲ್ಲಿ ಹೊರಬಂದ ಜಿಲ್ಲೆಯ ಸಾಧಕರ ಪುಸ್ತಕಗಳಿಗೆ ಬೇಡಿಕೆ ಮತ್ತು ಜನಪ್ರಿಯವಾಗಿರುವದರಿಂದ ಈಸಲ 3ನೇ ಆವೃತ್ತಿಯಲ್ಲಿ ಜ್ಞಾನಯೋಗಿ ಸಿದ್ದೇಶ್ವರ ಶ್ರೀಗಳ ಕುರಿತು ಹಾಗೂ ವಿವಿಧ ಕ್ಷೇತ್ರದ 9 ಸಾಧಕರ ಕು–ರಿತು ಪುಸ್ತಕ ಬರೆಯಿಸಿ ಅವುಗಳನ್ನು ಪ್ರಕಟಿಸಿ ಶಾಲಾ–ಕಾಲೇಜುಗಳಿಗೆ ತಲುಪಿಸುತ್ತೇವೆ. ವಿದ್ಯಾರ್ಥಿಗಳು ನಮ್ಮ ಸಾಧಕರ ಬಗ್ಗೆ ತಿಳಿದುಕೊಂಡು ಅವರ ಪ್ರಭಾವ ಮಕ್ಕಳ ಮೇಲೆ ಆಗಲಿ ಎಂಬುದು ನಮ್ಮ ಆಶಯ ಎಂದು ಬೆರಗು ಪ್ರಕಾಶನದ ಪ್ರಕಟಣಾ ವಿಭಾಗದ ಡಾ. ರಮೇಶ ಎಸ್. ಕತ್ತಿ ತಿಳಿಸಿದ್ದಾರೆ. ಈ ಮಾಲೆ ಜನರ ಹತ್ತಿರಕ್ಕೆ ಹೋಗುತ್ತಿರುವುದು ಸಮಾಧಾನ ತಂದಿದೆ ಎಂದು ಹೇಳಿದ್ದಾರೆ.

## ಲೋಕಾರ್ಪಣೆಗೊಳ್ಳಲಿರುವ 30 ಪುಸ್ತಕಗಳು

ನೋವಿಗೂ ಇದೆ ಚಲನೆ ಲೇ:ಹೇಮಾ ನಾಯಕ, ಓದಿದಷ್ಟೂ ಅರಿವು ಲೇ:ಡಾ. ರಮೇಶ ಎಸ್. ಕತ್ತಿ, ಕಾಯಿನ ಬೂತ್ ಲೇ: ಡಾ. ಲಕ್ಷ್ಮಣ ವಿ.ಎ, ದೀಪ ಹಚ್ಚುವ ಸಮಯ ಲೇ:ಸಿದ್ಧರಾಮ ಉಪ್ಪಿನ, ಭವದ ಸಂತಿ ಮಾಡುತ ಕುಂತಿ ಲೇ:ಇಸ್ಮಾಯಿಲ್ ಮೋರಟಗಿ,ಕನ್ನಡ ಅಸ್ಮಿತೆಯ ಚಹರೆಗಳು ಲೇ:ಪ್ರೊ. ರಾಜಕುಮಾರ ಬಡಿಗೇರ, ಆದ–ುನಿಕ ಕನ್ನಡ ಖಂಡ ಕಾವ್ಯ ಲೇ: ಡಾ.ಮಲ್ಲಪ್ಪ ಬಂಡಿ, ಅಪ್ಪನ ಲೆಕ್ಕ ಲೇ:ಪುಂಡಲೀಕ ಕಲ್ಲಿಗನೂರ, ಒಳನೋಟ ಲೇ:ಪ್ರಭಾವತಿ ದೇಸಾಯಿ, ಔರಂಗಜೇಬ (ನಾಟಕ)ಲೇ:ಡಾ.ಮಲ್ಲಪ್ಪ ಬಂಡಿ, ಗ್ರಾಮೀಣಾಭಿವೃದ್ಧಿ ಮತ್ತು ಸಮೂಹ ಮಾಧ್ಯಮಗಳು ಲೇ: ಡಾ.ಸಂಜಯಕುಮಾರ ಮಾಲಗತ್ತಿ, ಅನುರಣನ ಲೇ:ಡಾ.ಮಲ್ಲಪ್ಪ ಬಂಡಿ, ಅಪ್ಪನೆಂಬೊ ಆಗಸಲೇ:ಡಾ. ವೈ.ಎಂ.ಯಾಕೊಳ್ಳಿ, ಅಳುವ ನದಿ ಲೇ: ಸನಾವುಲ್ಲಾ ನವಿಲೇಹಾಳು, ನನ್ನೆದೆಯ ಕೊಳಲು ಲೇ: ಲಕ್ಷ್ಮಿ ಮುದೇನೂರು, ಬುದ್ದ ಇದ್ದನಲ್ಲಿ ಲೇ:ಡಾ.ಸುಜಾತ ಚಲವಾದಿ, ಅಮ್ಮ ಲೇ:ಪಿ.ಬಿ.ಅವಜಿ, ಗೊಲ್ಲಾಳೇಶತನಯ ಸಂ:ಶಂಕರ ಬೈಚಬಾಳ, ಹುಟ್ಟು ಸಾವಿನ ಕಟ್ಟು ಹರಿದು (ತತ್ವಪದಗಳು) ಸಂ:ಸಾಹೇಬಗೌಡ ಯ. ಬಿರಾದಾರ, ಕೆ.ಎಚ್.ಸೋಮಾಪೂರ–75 ಸಂ:ಡಾ. ಮಿರಾಜಪಾಶಾ

ನಾವು– ನಮ್ಮ ಸಾಧಕರು ಮಾಲೆಯ ಪ್ರಕಟಣೆಗಳು: ಶಬ್ದಾತೀತರೊಂದಿಗಿನ ಶಬ್ದಗಳು (ಶ್ರೀ ಸಿದ್ದೇಶ್ವರ ಶ್ರೀಗಳು) ಲೇ:ಶಂಕರ ಬೈಚಬಾಳ, ರಾಗಂ ಬರಹ ಬೆರಗು ಲೇ:ಅನುಸೂಯ ಯತೀಶ, ಡಾ.ಪದ್ಮರಾಜ ದಂಡಾವತಿ ಅವರ ಜೀವನ ಮತ್ತು ಸಾಧನೆಗಳು: ಲೇ:ಡಾ.ಶ್ರೀದೇವಿ ಎನ್.ಎಂ, ಜಾನಪದ ಸಿರಿ ಡಾ.ಎಂ.ಎಂ ಪಡಶೆಟ್ಟಿ ಲೇ:ಡಾ. ಎಚ್.ಎಸ್.ಘಂಟಿ, ಕಥಾಸಂಗಮ ಲೇ:ಪ್ರೊ.ಚಂದ್ರಶೇಖರ ಹೆಗಡೆ, ಬೀದಿ ನಾಟಕದ ಭೀಷ್ಮ ಸೋಮಶೇಖರ ಬದುಕು–ಬಣ್ಣ ಲೇ:ಸಿ.ಎಂ.ಬಂಡಗರ, ಡಾ.ಚನ್ನಪ್ಪ ಕಟ್ಟಿ ಅವರ ಸಾಹಿತ್ಯ ಮತ್ತು ಸಾಧನೆ ಲೇ:ರಾಜೇಶ್ವರಿ ಸಾಲಿಮಠ, ಸುರಗಿಯ ಮೊನೆ (ಡಾ.ಬಸವರಾಜ ಡೋಣೂರ ಬದುಕು ಬರಹ) ಲೇ:ವಿಜಯಲಕ್ಷ್ಮಿ ▯▯ ದಾನರಡ್ಡಿ, ಹಣತೆಯ ಬೆಳಕು (ಶಶಿಕಲಾ ವಸ್ತ್ರದ ಬದುಕು ಬರಹ)ಲೇ:ಹೇಮಲತಾ ವಸ್ತ್ರದ

# ಜೆಎಸ್ಎಸ್ ಆಸ್ಪತ್ರೆಗೆ ಯಶಸ್ಸಿನ ಪ್ರಶಂಸೆಯ ಗರಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಪ್ರಾರಂಭಗೊಂಡ ಒಂದು ವರ್ಷದ ಅವಧಿಯಲ್ಲಿ ತನ್ನ ಅತ್ಯುತ್ತಮ ಸೇವೆಯಿಂದಾಗಿ ಜಿಲ್ಲಾದ್ಯಂತ ಗುರುತಿಸಿಕೊಂಡಿದೆ.

ಲಕ್ಷಾಂತರ ರೋಗಿಗಳಿಗೆ ನೆರವಾಗುವುದರ ಮೂಲಕ ಒಂದು ವರ್ಷದ ಅವಧಿಯಲ್ಲಿ ಯಶಸ್ವಿ ಕಿಡ್ನಿ ಟ್ರಾನ್ಸ್ಪ್ಲಾಂಟ ಮಾಡುವ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಸದಾ ನಿಮ್ಮ ಸೇವೆಯಲ್ಲಿ ಎನ್ನುವ ಘೋಷವಾಕ್ಯದಡಿಯಲ್ಲಿ ಸೇವೆ ಸಲ್ಲಿಸುವ ಆಸ್ಪತ್ರೆಯು ಪ್ರಸ್ತುತ ಪ್ರಧಾನ ಮಂತ್ರಿಯವರ ಕನಸಿನ ಆರೋಗ್ಯ ಕರ್ನಾಟಕ ಹಾಗೂ ಆಯುಷ್ಮಾನ್ ಭಾರತ ಯೋಜನೆಯನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸುವುದರೊಂದಿಗೆ ಅವಶ್ಯಕತೆಯುಳ್ಳ ಬಡವರಿಗೆ ನೆರವಾಗುವಲ್ಲಿ ಯಶಸ್ವಿಯಾಗಿದ್ದನ್ನು ಗಮನಿಸಿದ ಸರ್ಕಾರ ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡ ರಾಜ್ಯದ ಅತ್ಯುತ್ತಮ ಆಸ್ಪತ್ರೆ ಎಂದು ಘೋಷಿಸಿ, ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಿದೆ.

ನಗರದ ಡಾ.ಬಿ.ಆರ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ 75 ಗಣರಾಜ್ಯೋತ್ಸವದ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಪ್ರಮಾಣಪತ್ರವನ್ನು ನೀಡಿ ಗೌರವಿಸಿದರು.

ಆಸ್ಪತ್ರೆಯ ಈ ಸಾಧನೆಗೆ ಶ್ರೀ ಸಿದ್ಧೇಶ್ವರ ಲೋಕ ಕಲ್ಯಾಣ ಚಾ–ರಿಟೇಬಲ್ ಟ್ರಸ್ಟ್ನ ಅಧ್ಯಕ್ಷರು ಹಾಗೂ ನಗರದ ವಿಧಾನಸಭಾ ಶಾಸಕ ಬಸನಗೌಡ ರಾ. ಪಾಟೀಲ್ ಯತ್ನಾಳ, ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ಸೇರಿದಂತೆ ಸರ್ವ ಸದಸ್ಯ ಬಳಗದವರು ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಶುಭ ಹಾರೈಸಿದ್ದಾರೆ.

# ಅಂಬೇಡ್ಕರ್ ಪುತ್ಥಳಿಗೆ ಅವಮಾನ :ಡಿಎಸ್ಎಸ್ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**



ಕಲಕೇರಿ: ಕಲಬುರ್ಗಿ ನಗರದ ಕೋಟನೂರ್ ಲುಂಬಿಣಿ ಉಧ್ಯಾನವನದಲ್ಲಿರುವ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಅವಮಾನ ಮಾಡಿರುವ ದುಷ್ಕರ್ಮಿಗಳನ್ನು ಬಂದಿಸಿ ಅವರಿಗೆ ಕಠಿಣ ಶಿಕ್ಷೆಗೆ ಒಳಪಡಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಘಟನೆಯ ಸದಸ್ಯರು ಕಲಕೇರಿ ಗ್ರಾಮದಲ್ಲಿ ಅಂಬೇಡ್ಕರ್ ವೃತ್ತದಿಂದ ಮುಖ್ಯ ಬಜಾರ ವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು.

ಬ್ರಹತ್ ಪ್ರತಿಭಟನಾ ರ್‍ಯಾಲಿ ಮುಖಾಂತರ ಮುಖ್ಯ ಬಜಾರ ತಲುಪಿ ಅಲ್ಲಿ ಟೈರ್‌ಗೆ ಬೆಂಕಿಯನ್ನು ಹಚ್ಚಿ ಪ್ರತಿಭಟನಾಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಪ್ರತಿಭಟನಾ ಸ್ಥಳಕ್ಕಾಗಮಿಸಿದ ತಾಳಿಕೋಟಿ ಕಂದಾಯ ನೀರಿಕ್ಷಕ ದುಂಡಯ್ಯ ಮಠಪತಿ ಅವರ ಮೂಲಕ ಘನವೆತ್ತ ರಾಜ್ಯಪಾಲರಿಗೆ ತಲುಪುವಂತೆ ಮನವಿಯನ್ನು ಪ್ರತಿಭಟನಾಕಾರರು ಸಲ್ಲಿಸಿದರು.

ಈ ಸಂದರ್ಭದಲ್ಲಿ ಅನೇಕ ಪ್ರತಿಭಟನಾಕಾರರು ಮಾತನಾಡಿ, ಈ ಘಟನೆಗೆ ಸಂಬಂಧಿಸಿದ ಎಲ್ಲ ದುಷ್ಕರ್ಮಿಗಳನ್ನು ಬಂದಿಸಿ, ಅವರ ಮೇಲೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸುವಂತೆ ಆಗ್ರಹಪಡಿಸಿದರು. ಇಂತಹ ದುಷ್ಕೃತ್ಯಗಳು ಮತ್ತೆ ನಡೆಯದಂತೆ ಸೂಕ್ತ ಪೋಲಿಸ್ ಬಂದೋಬಸ್ತಿ ಮತ್ತು ಗುಪ್ತಚರ ಇಲಾಖೆಗಳು ಕ್ರಮವಹಿಸಬೇಕೆಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯ ಲಕ್ಕಪ್ಪ ಬಡಿಗೇರ, ಹಣಮಂತ ವಡ್ಡರ, ಶರಣು ಶಿಂದೆ, ಪರಶುರಾಮ ದೊರೇಗೋಳ, ಸಲಿಂ ನಾಯ್ಕೋಡಿ, ಚಾಂದಪಾಶಾ ಹವಾಲ್ದಾರ, ಭಿಮಣ್ಣ ವಡ್ಡರ, ಮಾದೇವ ಲಿಂಗದಳ್ಳಿ, ಶಿವಶರಣ ಹೊಸಮನಿ, ಶಿವಾನಂದ ವಾಲಿಕಾರನಬಿಲಾಲ್ ನಾಯ್ಕೋಡಿ, ಸಂತೋಷ ಮೋಪಗಾರ, ಸಂಗು ದೇಸಾಯಿ, ಹಾಜಿಪಾಷಾ ಜಾಗೀರದಾರ, ದೇವಿಂದ್ರ ಬಡಿಗೇರ, ಪ್ರಕಾಶ ಪುಜಾರಿ, ಲಕ್ಷ್ಮಣ ಹೋಸಮನಿ, ರಮೇಶ ಹೋಸಮನಿ, ಶಿವು ಹೋಸಮನಿ, ಅಶೋಕ ವಡ್ಡರ್, ದತ್ತಪ್ಪ ಬನ್ನೆಟ್ಟಿ, ರವಿ ಸುದಾಕರ್, ವಿನೋದ ವಡಗೇರಿ, ಅಶೋಕ ಕೇರೂಟಗಿ, ಸಂಜೀವ ಪವಾರ,ಮಹೇಶ ದೋಡಮನಿ, ಅಶೋಕ ಗಡಸಲಮನಿ ಸೇರಿದಂತೆ ಇತರರು ಇದ್ದರು.

# ಬ್ಯಾಟರಿ ಚಾಲಿತ ವ್ಹೀಲ್ ಚೇರ್ :ಅರ್ಜಿ ಆಹ್ವಾನ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜಿಲ್ಲಾ ವ್ಯಾಪ್ತಿಯ ಅರ್ಹ ವಿಕಲಚೇತನರಿಗೆ ಪ್ರಸಕ್ತ ಸಾಲಿನಲ್ಲಿ ಬ್ಯಾಟರಿ ಚಾಲಿತ ವ್ಹೀಲ್ ಚೇರ್ ವಿತರಿಸುವುದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಫೆಬ್ರವರಿ 15 ಕೊನೆಯ ದಿನವಾಗಿದೆ.

ಕುಟುಂಬ ವಾರ್ಷಿಕ ಆದ–ಾಯ ರೂ.2 ಲಕ್ಷ ಒಳಗಿರಬೇಕು. ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ಪಡೆದಿರಬೇಕು. ದೈಹಿಕ ವಿಕಲಚೇತನರ ಶೇ.75ರಷ್ಟು ಇದಕ್ಕಿಂತ ಹೆಚ್ಚಿನ ವಿಕಲಚೇತನ ಹೊಂದಿದ ಯಂತ್ರ ಚಾಲಿತ ದ್ವಿಚಕ್ರ ವಾಹನ ಚಾಲನೆ ಮಾಡುವ ಸಾಮಥ–್ಯ ಹೊಂದಿದ, ಬ್ಯಾಟರಿ ಚಾಲಿತ ವ್ಹೀಲ್ ಚೇರ್ ಚಲಾಯಿಸಲು ಇತರೇ ಎಲ್ಲಾ ರೀತಿಯಲ್ಲಿ ಸದೃಢರಾಗಿರುವ ವಿಕಲಚೇತನರಾಗಿರಬೇಕು. ಸರ್ಕಾರದಿಂದ ಯಂತ್ರಚಾಲಿತ ದ್ವಿಚಕ್ರ ವಾಹನ ಪಡೆದಿರಬಾರದು.

ಹೆಚ್ಚಿನ ಮಾಹಿತಿಗಾಗಿ ವಿಜಯಪುರ – ರವಿ ರಾಠೋಡ ( ಮೊ.9035553337), ಇಂಡಿ – ಪರಶುರಾಮ ಭೋಸಲೆ (ಮೊ.9972441464), ಸಿಂದಗಿ – ಮುತ್ತುರಾಜ ಸಾತಿಹಾಳ (ಮೊ.9980019635), ಬಸವನ ಬಾಗೇವಾಡಿ – ಎಸ್. ಡಿ ಬಿರಾದಾರ (ಮೊ.8722135660) ಹಾಗೂ ಮುದ್ದೇಬಿಹಾಳ – ಎಸ್.ಕೆ. ಘಾಟಿ (ಮೊ.9740682979) ಕಚೇರಿ ದೂರವಾಣಿ ಸಂಖ್ಯೆ 08352–796060ಗೆ ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿಗಳಾದ ರಾಜಶೇಖರ ದೈವಾಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪ್ರೇಮದ ಪ್ರತೀಕ ಶ್ರೀರಾಮ**

# ನೆಗ್ಗಲು_ಮುಳ್ಳು

**ಭಾವರಶ್ಮಿ**



– ವಿಜಯಲಕ್ಷ್ಮಿ. ಎಂ.
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಆ ಸೃಷ್ಟಿ ಅದೆಲ್ಲಿಂದ ನನ್ನನ್ನು ಹೊತ್ತು ತಂದು ಗಾಳಿಯಲ್ಲಿ ತೂ–ರಿಬಿಟ್ಟಿತ್ತೋ.... ನಾನೆಲ್ಲಿ ಬಿದ್ದೆನೋ.... ಎಂಥ ಜನ್ಮ ತಳೆದೆನೋ.... ಎಂಥ ಜನ್ಮವೆನ್ನಲು ನನಗೇನು ಆಯ್ಕೆಯ ಅವಕಾಶವಿತ್ತೇ? ಚಿಕ್ಕ ಪೊದೆಯ ನಡುವಿನ ಗಿಡವೊಂದರಲ್ಲಿ ಪುಟ್ಟ ಮೊಗ್ಗಾಗಿ ಉದಿಸಿದ್ದೆ. ಮುಂದೆ ಚಿಕ್ಕದಾಗಿ ಹಳದಿ ದಳಗಳು ಅರಳುವಾಗ ನನ್ನ ಚೆಂದಕ್ಕೆ ನಾನೇ ಸ್ವಲ್ಪ ಬೀಗಿದ್ದೂ ನಿಜ! ಮೊಗ್ಗು ಹೂವಾಗಿ.... ಹೂವು ಕಾಯಾಗಿ.... ಕಾಯಿ ಬೀಜವಾಗಿ.... ಈ ಸೃಷ್ಟಿಕ್ರಿಯೆಯಲ್ಲಿ ಮುಂದೊಮ್ಮೆ ನಾನೂ ಇಂಥದ್ದೇ ಸುಂದರ ಹೂವುಗಳನ್ನು ಅರಳಿಸುವವಳಿದ್ದೇನೆ ಎಂಬ ಕಲ್ಪನಾ ಲಹರಿಯಲ್ಲಿ ತೇಲುವಾಗಲೇ ನನ್ನ ದಳಗಳು ಉದುರಿ ಸ್ವಲ್ಪ ದಪ್ಪವಾದ ಹಸಿರು ಹೊದಿಕೆ ಮೂಡಿತ್ತು. ಆಗ ಸ್ವಲ್ಪ ಉಸಿರುಗಟ್ಟಿದಂತೆನ್ನಿಸಿದರೂ ನಾನು ಅದೇ ಭಾವಲಹರಿಯಲ್ಲಿ ಹಿಂಸೆ ಸಹಿಸಿಕೊಳ್ಳುತ್ತಿದ್ದೆ. ಮುಂದೆ ಮೆಲ್ಲಗೆ ನನ್ನೊಡಲಲ್ಲಿ ಚಿಕ್ಕದಾಗಿ ಮುಳ್ಳುಗಳೇಳುತ್ತಿರುವುದು ಕಂಡು ವ್ಯಾಕುಲತೆ ಆವರಿಸಿತ್ತಲ್ಲ. ಸುಂದರ ಹೂವಾಗಿದ್ದ ನಾನು ಮುಳ್ಳಾಗಿ ಪರಿವರ್ತನೆಯಾಗುತ್ತಿರುವೆನೇ? ಅಂದರೆ.... ನಾನು ಬಲಿತರೆ ಇತರ ಜೀವಿಗಳಿಗೆ ಕಂಟಕಪ್ರಾಯಳಾಗುವೆ. ಮುಂದೆ ನನ್ನೊಡಲಿಂದ ಹೊರಬರುವ ಬೀಜಗಳೂ ಇಂಥದ್ದೇ ಮುಳ್ಳುಗಳ ಹುಟ್ಟಿಗೆ ಕಾರಣವಾದೀತೇ?? ಅಯ್ಯೋ.... ನನ್ನದು ಇದೆಂಥಾ ಪಾಪಿ ಜನ್ಮ !!!!!

ಆಹಾ! ಅದೆಂಥಾ ನರುಗಂಪು ಸೂಸುತ್ತಿದೆ ಇಂದು ಈ ಗಾಳಿ ! ಹುಟ್ಟಿದಾಕ್ಷಣದಿಂದಲೂ ಈ ಪರಿಸರವನ್ನು ನಾನು ಬಲ್ಲೆನಲ್ಲಾ. ಈ ಬೆಂಗಾಡಿನಲ್ಲಿ ಇಂಥ ಕಂಪು ಸೂಸುವ ವನರಾಜಿಯನ್ನು ಇದುವರೆಗೂ ನಾನೆಂದೂ ನೋಡಿಲ್ಲವಲ್ಲ!

"ಅದೋ..... ಅಲ್ಲಿ ರಾಮ ಬರುತ್ತಿದ್ದಾನೆ. ಸೀತಾ ಲಕ್ಷ್ಮಣ ಸಮೇತನಾಗಿಯೇ ರಾಮ ಇತ್ತಕಡೆ ಬರುತ್ತಿದ್ದಾನೆ!"

"ತನ್ನ ನಾಡಿನಿಂದ ಕಾಡಿನತ್ತ ಬರುತ್ತಿದ್ದಾನೆ. ಅವನಿಗೆ ರಾಜ್ಯ ತೊರೆದು ವನವಾಸಿಯಾಗಿರಲು ಅವನ ತಂದೆಯ ಆಜ್ಞೆ ಯಾಗಿದೆಯಂತೆ!"

"ಇಲ್ಲ.... ಇಲ್ಲಾ..... ಅವನು ರಾಜಕುಮಾರ. ಯಾರದೋ ಕುಟಿಲೋಪಾಯದಿಂದ ಅವನು ಕಾಡಿಗೆ ಬರುವಂತಾಗಿದೆಯಂತೆ. ಅವನಿಗೆ ಇದು ಶಿಕ್ಷೆಯಲ್ಲ. ಪಿತೃವಾಕ್ಯ ಪರಿಪಾಲನೆಗಾಗಿ ಇತ್ತ ಬರುತ್ತಿದ್ದಾನೆ. ಸರ್ವರನ್ನೂ ಪ್ರೀತಿಸುವ ರಕ್ಷಿಸುವ ಉದ್ಧರಿಸುವ ಸುಗುಣಾಭಿರಾಮ ಅವನು."

ಓಹ್ ! ಗಿಡದ ಮೇಲಿನ ಗಿಣಿ ಗೊರವಂಕಗಳು ಮಾತಾಡಿಕೊಳ್ಳುತ್ತಿರುವುದು ನನಗೂ ಕೇಳುತ್ತಿದೆ. ಅಂದರೆ..... ಆ ಮೋಹನರಾಮನ ಆಗಮನದ ಸೂಚನೆಯಾಗಿ ಗಾಳಿ ನರುಗಂಪು ಸೂಸಿದೆ. ರಾಮ ಎಲ್ಲರನ್ನೂ ಪ್ರೀತಿಸುವನಂತೆ. ಉದ್ಧರಿಸುವನಂತೆ.

ಇತ್ತ ನನ್ನ ಒಳಮನ ಇನ್ನೇನನ್ನೋ ಬೇಡುತ್ತಿದೆ. "ರಾಮಾ! ನನ್ನ ಉದ್ಧರಿಸೋ..... ನನಗೆ ಈ ಜನ್ಮ ಬೇಡವಾಗಿದೆ. ನನ್ನಿಂದ ಮತ್ತಷ್ಟು ಮುಳ್ಳುಗಳ ಜನ್ಮವಾಗುವುದು ಬೇಡ. ನನ್ನನೀಗಲೇ.... ಇಲ್ಲಿಯೇ ಕೊನೆಗಾಣಿಸೋ.....

ಅದೋ ಮೂವರೂ ಕಾಣುತ್ತಿದ್ದಾರೆ. ಮುಂದೆ ಬರುತ್ತಿರುವವ ರಾಮನ ತಮ್ಮ ಲಕ್ಷ್ಮಣನಂತೆ. ರಾಮ ಬರುವ ದಾರಿಯಲ್ಲಿ ಕಲ್ಲು ಮುಳ್ಳು ತೆಗೆದು ಹಾದಿ ಸುಗಮಗೊಳಿಸುತ್ತಿರುವನಂತೆ. ಎಲ್ಲೆಡೆ ಹಾರಾಡಿ ಸುದ್ದಿ ತರುವ ಇವರಂತೆ ನಾನೂ ಒಂದು ಪಕ್ಷಿಯಾಗಿರಬಾರದಿತ್ತೇ.....

ಬಂದ..... ಲಕ್ಷ್ಮಣ ನನ್ನ ಬಳಿಯೇ ಬರುತ್ತಿದ್ದಾನೆ.... ನಾನು ಕೊಂಚವೇ ಕತ್ತೆತ್ತಿ ನೋಡುತ್ತಿದ್ದೇನೆ.... ನನ್ನೊಡಲೊಳಗಿನ ಬೀಜಗಳು ಬಲಿಯುವ ಮುನ್ನ.... ಲಕ್ಷ್ಮಣ ನನ್ನನ್ನೂ ಕಿತ್ತು ಬದಿಗೆ ಬಿಸಾಡಿಬಿಡಲಿ..... ಮನದೊಳೇನೋ ವಿಲಕ್ಷಣ ಬಯಕೆ.

ಅಯ್ಯೋ.... ನಾನೆಂಥ ಪಾಪಿ ! ಅದೆಷ್ಟು ಸೆಟೆದು ನಿಂತು ನನ್ನಿರುವ ಅವನಿಗೆ ತೋರಿದರೂ ಲಕ್ಷ್ಮಣನ ದೃಷ್ಟಿಗೆ ನಾನು ಬೀಳಲೇ ಇಲ್ಲವೇ..... ನಾನು ಕಣ್ಣು ಬಿಗಿಯಾಗಿ ಹಿಂಡಿ ಕಣ್ಣೀರನ್ನು ತೊಡೆದು ಕೊಳ್ಳುತ್ತಿರುವಾಗಲೇ ನನಗೆ ದೊರೆತಿತ್ತೊಂದು ವರ್ಣಿಸಲಾಗದ ಮೃದುಲ ಸ್ಪರ್ಶಾನುಭವ. ಜೊತೆಗೆ ಗಂಭೀರವಾದ ಚುಟುಕು ನುಡಿ –– " ಸ್ವಲ್ಪ ನಿಲ್ಲು ಸೀತೇ...". "ಏಕೆ ಕಾಂತ? ಓಹ್! ಏನದು?" ವೀಣಾನಾದದಂತೆ ಸೀತಮ್ಮ ಮೆಲುದನಿಯಿಂದ ಕೇಳಿದ್ದಳು. "ಇದೊಂದು ಪುಟ್ಟ ಮುಳ್ಳು ದೇವೀ. ಲಕ್ಷ್ಮಣನಿಗೆ ಗೋಚರಿಸಿಲ್ಲ. ನಮ್ಮಂತೆಯೇ ಇಲ್ಲಿ ತಿರುಗಾಡುವ ಬೇರಾವ ಪ್ರಾಣಿಗಳಿಗೂ ಇದರಿಂದ ಘಾಸಿಯಾಗಬಾರದಲ್ಲ!" ಎನ್ನುತ್ತಾ ತನ್ನ ನೀಳವಾದ ಮೂರೇ ಮೂರು ಬೆರಳುಗಳಿಂದ ನನ್ನ ತಾಯಿಗಿಡದ ಬೇರು ಸಹಿತ ನಮ್ಮನ್ನು ನೆಲದಿಂದ ನಿರ್ಮೂಲ ಮಾಡಿಬಿಟ್ಟಿದ್ದ ರಾಮ.



"ನನಗೂ ಮುಳ್ಳು ತೋರಿಸು ರಾಮಾ" ಮುಗ್ಧವಾಗಿ ಕೇಳಿದ ಸೀತಮ್ಮನಿಗೆ ರಾಮ ನನ್ನನ್ನು ಸೂಕ್ಷ್ಮವಾಗಿ ಹಿಡಿದೆತ್ತಿ ತೋರುವಾಗ ನನ್ನೊಳಗೇ ಅದೆಂಥಾ ರೋಮಾಂಚನ. ರಾಮನ ಕರಸ್ಪರ್ಶದಿಂದ ಪಾವನವಾಗಿತ್ತು ನನ್ನ ಜನ್ಮ.

"ಅಬ್ಬಾ.... ಇದರ ಮುಳ್ಳುಗಳು ಅದೆಷ್ಟು ಹರಿತವಾಗಿವೆ!" ಸೀತಮ್ಮ ಬೆದರಿದಂತಿತ್ತು. "ಈ ಸೃಷ್ಟಿಯ ಪ್ರತೀ ಜೀವಿಯ ಹುಟ್ಟಿಗೂ ಒಂದೊಂದು ಕಾರ್ಯಕಾರಣ ಸಂಬಂಧ ಇದ್ದೇ ಇರುತ್ತದೆ ಸೀತೇ. ಈ ಮುಳ್ಳು ಹರಿತವೆನ್ನುತ್ತೀ. ಆದ–'ರೆ ಇದರಲ್ಲಿ ಹಲವು ಔಷಧೀಯ ಗುಣಗಳಿರುವುದೂ ನಿಜ. ಅದನ್ನು ಅಲಕ್ಷ್ಯದಿಂದ ತುಳಿದರೆ ನೋವಾದೀತು. ಅಲಕ್ಷ್ಯದಿಂದಿರುವುದು ನಮ್ಮ ನಮ್ಮ ಸ್ವಯಂ ಶಿಕ್ಷೆಗೆ ಕಾರಣವಾಗುತ್ತದಲ್ಲವೇ. ಅದರಲ್ಲಿ ಈ ಮುಳ್ಳಿನ ತಪ್ಪೇನಿದ್ದೀತು? ಆದರೆ ಅದನ್ನೇ ನಾವು ಲಕ್ಷ್ಯವಹಿಸಿ ಬೆಳೆಸಿದರೆ ಹತ್ತು ಹಲವು ರೋಗಗಳಿಗೆ ಅದೇ ಮದ್ದೂ ಆದೀತು. ಮನುಷ್ಯ ಯಾವುದನ್ನು ಹೇಗೆ ಉಪಯೋಗಿಸಬೇಕೆಂಬ ವಿಚಕ್ಷಣೆಯನ್ನು ರೂಢಿಸಿಕೊಂಡರೆ ಅವನು ಇಡೀ ಜಗತ್ತಿಗೆ ಒಳಿತು ಮಾಡಬಲ್ಲ."

ಅಬ್ಬಾ.... ರಾಮನೆಂದರೆ ಇವನು ನಿಜವಾಗಿಯೂ ಲೋಕಪಾಲಕನೇ ಸೈ.... ಅದೆಂಥಾ ಘನತೆಯುಕ್ತ ಹೊನ್ನುಡಿ ನುಡಿದನಲ್ಲಾ ! ಒಂದೆರಡು ಕ್ಷಣದಲ್ಲಿ ರಾಮ ಸೀತೆ ತಮ್ಮ ಹಾದಿಯಲ್ಲಿ ಮುಂದುವ–ರಿದು ನಡೆದದ್ದು ನಿಜವಾದರೂ.... ಹಾದಿ ಬದಿಯಲ್ಲಿ ಬುಡಸಹಿತ ಕಿತ್ತ ಗಿಡದೊಳಗೆ ಬಿದ್ದಿದ್ದ ನನ್ನ ಮನಸ್ಸು ಮಾತ್ರ "ಈ ಸೀತೆ ಬಯಸಿ ಮುಡಿವ ಪುಟ್ಟ ಹೂವಾಗಿ ನನಗೊಂದು ಮರುಜನ್ಮ ನೀಡು ದೇವಾ...."ಎಂದು ದೈನ್ಯದಿಂದ ಬೇಡುತ್ತಿತ್ತು.